ತಂತಿ ವಿಳಾಸ ಯೂನಿರಿಜ್
ದೂರವಾಣಿ ಸಂಖ್ಯೆ: 2419277/2419210
ಫ್ಯಾಕ್ಸ್: 0821-3419363/24193011

e-mail registrar@Uni-mysore-ac-in
www.uni-mysore-ac-in

# ಮೈಸೂರು ವಿಶ್ವವಿದ್ಯಾನಿಲಯ

ಸ್ಥಾಪನೆ 1916

ಸಂಖ್ಯೆ: ಯುಎ-1/60/2020-21

ದಿನಾಂಕ: 16-01-2021

**"ಪ್ರಾಮಾಣಿಕ ಅಂಚೆ ಮೂಲಕ"**

ಮಾನ್ಯ ಶಿಕ್ಷಣ ಮಂಡಳಿ ಸದಸ್ಯರುಗಳಿಗೆ,

ಮಾನ್ಯರೆ,

ವಿಷಯ: ದಿನಾಂಕ: 07-12-2020ರಂದು ನಡೆದ ಶಿಕ್ಷಣ ಮಂಡಳಿಯ ಎರಡನೇ ಸಾಮಾನ್ಯ ಸಭೆಯ ನಡವಳಿಯನ್ನು ಕಳುಹಿಸುವ ಬಗ್ಗೆ.

* * * * *

ದಿನಾಂಕ: 07-12-2020ರಂದು ಬೆಳಗ್ಗೆ 11-30 ಗಂಟೆಗೆ, ಮಾನಸಗಂಗೋತ್ರಿಯ ವಿಜ್ಞಾನ ಭವನ ಸಭಾಂಗಣದಲ್ಲಿ ನಡೆದ, ಶಿಕ್ಷಣ ಮಂಡಳಿಯ ಎರಡನೇ ಸಾಮಾನ್ಯ ಸಭೆಯ ನಡವಳಿಗಳ ಪ್ರತಿಯನ್ನು ತಮ್ಮ ಮಾಹಿತಿಗಾಗಿ ಈ ಮೂಲಕ ಕಳುಹಿಸಿಕೊಡಲಾಗಿದೆ, ನಡವಳಿಯಲ್ಲಿ ಹೇಳಿರುವ ಯಾವುದೇ ಅಂಶದ ಯಥಾರ್ಥತೆಯ ಬಗ್ಗೆ ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳಿಂದ ನಡವಳಿಗಳನ್ನು ಕಳುಹಿಸಿದ ದಿನಾಂಕದಿಂದ 21 ದಿನಗಳ ಒಳಗಾಗಿ ಆಕ್ಷೇಪಣೆ ಬಾರದಿದ್ದಲ್ಲಿ, ನಡವಳಿಯಲ್ಲಿ ಹೇಳಿರುವ ಎಲ್ಲಾ ಅಂಶಗಳು ಸರಿಯಾಗಿವೆ ಎಂದು ಪರಿಗಣಿಸಲ್ಪಡುತ್ತವೆ. ಆದುದರಿಂದ, ನಡವಳಿಯ ಬಗ್ಗೆ ನಿಮ್ಮ ಆಕ್ಷೇಪಣೆ(ಗಳು) ಏನಾದರೂ ಇದ್ದಲ್ಲಿ, ಈ ಬಗ್ಗೆ "ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಕ್ರಾಫರ್ಡ್ ಭವನ, ಮೈಸೂರು" ಇವರನ್ನು ಉದ್ದೇಶಿಸಿ ಬರೆದ ಪತ್ರವನ್ನು ದಿನಾಂಕ 05-02-2021ರ ಒಳಗಾಗಿ, ಉಪಕುಲಸಚಿವ(ಪ್ರಾಧಿಕಾರ) ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಕ್ರಾಫರ್ಡ್‌ಭವನ, ಮೈಸೂರು-570 005 ಇವರಿಗೆ ನೇರವಾಗಿ ತಲುಪಿಸುವಂತೆ ಕೋರಲಾಗಿದೆ.

ತಮ್ಮ ನಂಬುಗೆಯ

Lingaraju 16/01/2021

ಉಪಕುಲಸಚಿವ(ಪ್ರಾಧಿಕಾರ)

ಪ್ರತಿ:

1. ಗೌರವಾನ್ವಿತ ರಾಜ್ಯಪಾಲರ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು – ಗೌರವಾನ್ವಿತ ರಾಜ್ಯಪಾಲರ ಅವಗಹಾನೆಗೆ ತರಬೇಕಾಗಿ ಕೋರಲಾಗಿದೆ.
2. ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ(ವಿಶ್ವವಿದ್ಯಾನಿಲಯ), ಬಹುಮಹಡಿಗಳ ಕಟ್ಟಡ, ಬೆಂಗಳೂರು -01
3. ಕುಲಸಚಿವರು(ಪರೀಕ್ಷಾಂಗ)/ಹಣಕಾಸು ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು -5
4. ನಿರ್ದೇಶಕರು, ಪಿ.ಎಂ.ಇ.ಬಿ/ ಕಾಲೇಜು ಅಭಿವೃದ್ಧಿ ಮಂಡಳಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು-05
5. ನಿರ್ದೇಶಕರು, ವಿದ್ಯಾರ್ಥಿಕ್ಷೇಮಪಾಲನ ನಿರ್ದೇಶನಾಲಯ, ಮಾನಸಗಂಗೋತ್ರಿ, ಮೈಸೂರು-06
6. ನಿರ್ದೇಶಕರು, ದೈಹಿಕ ಶಿಕ್ಷಣ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು-05
7. ಎಲ್ಲಾ ಉಪಕುಲಸಚಿವರು/ಸಹಾಯಕ ಕುಲಸಚಿವರು(ಶೈಕ್ಷಣಿಕ/ಆಡಳಿತ/ಅಭಿವೃದ್ಧಿ/ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ವರ್ಗಗಳ ವಿಶೇಷ ಘಟಕ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
8. ಕುಲಪತಿ/ಕುಲಸಚಿವ/ಕುಲಸಚಿವ(ಪರೀಕ್ಷಾಂಗ)/ಹಣಕಾಸು ಅಧಿಕಾರಿಗಳ ಆಪ್ತ ಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
9. ಕಛೇರಿ ಪ್ರತಿ.

AC Forwarding letter

# ಮೈಸೂರು ವಿಶ್ವವಿದ್ಯಾನಿಲಯ

ಮೈಸೂರು ವಿಶ್ವವಿದ್ಯಾನಿಲಯದ ಮಾನಸಗಂಗೋತ್ರಿಯ ವಿಜ್ಞಾನ ಭವನ ಸಭಾಂಗಣದಲ್ಲಿ ದಿನಾಂಕ: 07-12-2020 ರಂದು ಸೋಮವಾರ ಪೂರ್ವಾಹ್ನ 11:30 ಗಂಟೆಗೆ ನಡೆದ ಶಿಕ್ಷಣ ಮಂಡಳಿಯ ಎರಡನೇ ಸಾಮಾನ್ಯ ಸಭೆಯ ನಡವಳಿಗಳು.

**ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳು**

| | | |
|---|---|---|
| 1. | ಪ್ರೊ. ಜಿ. ಹೇಮಂತಕುಮಾರ್, ಕುಲಪತಿಗಳು | ಅಧ್ಯಕ್ಷರು |
| 2. | ಶ್ರೀ ಆರ್. ಧರ್ಮಸೇನ | ಸದಸ್ಯರು |
| 3. | ಶ್ರೀ. ಶಾಂತಕುಮಾರ್ ಕೆ. | ಸದಸ್ಯರು |
| 4. | ಡಾ. ಕೆ.ಕೆ. ವಿಶಾಲಾಕ್ಷಿ | ಸದಸ್ಯರು |
| 5. | ಡಾ. ನಾಗರಾಜು | ಸದಸ್ಯರು |
| 6. | ಶ್ರೀ. ದಿನೇಶ್ ಎಂ. ಗಾಂವ್‌ಕರ್ | ಸದಸ್ಯರು |
| 7. | ಡಾ. ಬಿ.ಎಸ್. ಆಶಾ | ಸದಸ್ಯರು |
| 8. | ಡಾ. ಎಂ. ಶಾರದ | ಸದಸ್ಯರು |
| 9. | ಡಾ. ಕೆ.ಟಿ. ಕೃಷ್ಣೇಗೌಡ | ಸದಸ್ಯರು |
| 10. | ಡಾ. ಜೆ.ಎನ್. ವೆಂಕಟೇಶ್ | ಸದಸ್ಯರು |
| 11. | ಡಾ. ಬಿ. ರಾಜಣ್ಣ | ಸದಸ್ಯರು |
| 12. | ಪ್ರೊ. ಎನ್. ಎಂ. ತಳವಾರ್ | ಸದಸ್ಯರು |
| 13. | ಪ್ರೊ. ಡಿ. ಆನಂದ್ | ಸದಸ್ಯರು |
| 14. | ಪ್ರೊ. ಮುಜಾಫರ್ ಅಸ್ಸಾದಿ | ಸದಸ್ಯರು |
| 15. | ಪ್ರೊ. ಎಸ್.ಆರ್. ನಿರಂಜನ್ | ಸದಸ್ಯರು |
| 16. | ಪ್ರೊ. ಎಂ.ಜಿ. ಮಂಜುನಾಥ್ | ಸದಸ್ಯರು |
| 17. | ಪ್ರೊ. ರಮೇಶ್ | ಸದಸ್ಯರು |
| 18. | ಪ್ರೊ. ನಿಂಗಮ್ಮ ಸಿ. ಬೆಟ್ಸೂರ್ | ಸದಸ್ಯರು |
| 19. | ಡಾ. ಪಿ. ಸರಸ್ವತಿ, ಗ್ರಂಥಪಾಲಕರು (ಪ್ರಭಾರ) | ಸದಸ್ಯರು |
| 20. | ಪ್ರೊ. ಎನ್.ಕೆ ಲೋಕನಾಥ್<br>ನಿರ್ದೇಶಕರು, ಯೋಜನೆ, ಉಸ್ತುವಾರಿ ಮತ್ತು ಮೌಲ್ಯಮಾಪನ ಮಂಡಳಿ | ಸದಸ್ಯರು |
| 21. | ಪ್ರೊ. ಆರ್. ಶಿವಪ್ಪ, ಕುಲಸಚಿವರು ಹಾಗೂ ನಿರ್ದೇಶಕರು (ಪ್ರಭಾರ)<br>ಕಾಲೇಜು ಅಭಿವೃದ್ಧಿ ಮಂಡಳಿ | ಸದಸ್ಯರು |
| 22. | ಡಾ. ಪಿ. ಕೃಷ್ಣಯ್ಯ, ನಿರ್ದೇಶಕರು, (ಪ್ರಭಾರ) ದೈಹಿಕ ಶಿಕ್ಷಣ ವಿಭಾಗ | ಸದಸ್ಯರು |
| 23. | ಪ್ರೊ. ಕೆ.ಎಂ. ಮಹದೇವನ್, ಕುಲಸಚಿವ (ಪರೀಕ್ಷಾಂಗ) | ಸದಸ್ಯರು |
| 24. | ಪ್ರೊ. ಆರ್. ಶಿವಪ್ಪ, ಕುಲಸಚಿವರು | ಸದಸ್ಯ ಕಾರ್ಯದರ್ಶಿ |

**ವಿಶೇಷ ಆಹ್ವಾನಿತರು**

| | | |
|---|---|---|
| 25. | ಪ್ರೊ. ಜಿ. ವೆಂಕಟೇಶ್‌ಕುಮಾರ್<br>ಡೀನರು, ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ | ಸದಸ್ಯರು |

**ಸಭೆಗೆ ಹಾಜರಾಗದವರು**

1. ಶ್ರೀ ಮೂಗೇಶಪ್ಪ, ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಮೈಸೂರು.
2. ಆಯುಕ್ತರು, ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು.
3. ಶ್ರೀ ಸಿ.ಎಸ್. ನಿರಂಜನ್‌ಕುಮಾರ್, ವಿಧಾನ ಸಭಾ ಸದಸ್ಯರು
4. ಶ್ರೀ ಪ್ರೀತಮ್ ಜೆ. ಗೌಡ, ವಿಧಾನ ಸಭಾ ಸದಸ್ಯರು
5. ಶ್ರೀ ಎಂ. ಶ್ರೀನಿವಾಸ ವಿಧಾನ ಸಭಾ ಸದಸ್ಯರು
6. ಶ್ರೀ ಎಲ್. ನಾಗೇಂದ್ರ, ವಿಧಾನ ಸಭಾ ಸದಸ್ಯರು
7. ಶ್ರೀ ಎಂ.ಎ. ಗೋಪಾಲ್‌ಸ್ವಾಮಿ, ವಿಧಾನ ಪರಿಷತ್ ಸದಸ್ಯರು
8. ಡಾ. ವಿ.ಎಸ್. ಹನುಮಂತರಾಯ
9. ಪ್ರೊ. ಆರ್. ರಾಜಣ್ಣ
10. ಪ್ರೊ. ಸೋನಾರ್ ನಂದಪ್ಪ, ಡಿ
11. ಡಾ. ಎಸ್.ಟಿ. ರಾಮಚಂದ್ರ, ನಿರ್ದೇಶಕರು (ಪ್ರಭಾರ)
    ವಿದ್ಯಾರ್ಥಿಕ್ಷೇಮಪಾಲನ ನಿರ್ದೇಶನಾಲಯ
12. ಪ್ರೊ. ಟಿ.ಎಸ್. ದೇವರಾಜು, ಹಣಕಾಸು ಅಧಿಕಾರಿ (ಅನ್ಯಕಾರ್ಯನಿಮಿತ್ತ ಬೆಂಗಳೂರಿಗೆ)

ಮೊದಲಿಗೆ, ಮಾನ್ಯ ಕುಲಸಚಿವರು ಶಿಕ್ಷಣ ಮಂಡಳ ಎರಡನೇ ಸಭೆಗೆ ಆಗಮಿಸಿದ ಎಲ್ಲಾ ಸದಸ್ಯರುಗಳನ್ನೂ ಹಾಗೂ ಪತ್ರಿಕಾ ಮಾಧ್ಯಮದವರನ್ನೂ ಸಭೆಗೆ ಹೃತ್ಪೂರ್ವಕವಾಗಿ ಸ್ವಾಗತಿಸಿದರು.

ನಂತರ, ಇದುವರೆವಿಗೂ ಶಿಕ್ಷಣ ಮಂಡಳ ಸದಸ್ಯರಾಗಿ ಸೇವೆ ಸಲ್ಲಿಸಿ ನಿರ್ಗಮಿಸಿರುವ ಈ ಕೆಳಕಂಡ ಸದಸ್ಯರುಗಳ ಸೇವೆಯನ್ನು ಸ್ಮರಿಸಿ ದಾಖಲಿಸಲಾಯಿತು.

1. ಪ್ರೊ. ಶಿವಬಸವಯ್ಯ, ಪ್ರಾಣಿಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು
2. ಡಾ. ಎಸ್. ಶ್ರೀಕಂಠಸ್ವಾಮಿ, ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳ, ಮೌಲ್ಯ ಭವನ, ಮಾನಸಗಂಗೋತ್ರಿ, ಮೈಸೂರು.

ಹಾಗೂ

ಹೊಸದಾಗಿ ಶಿಕ್ಷಣ ಮಂಡಳ ಸದಸ್ಯರಾಗಿ ನಾಮನಿರ್ದೇಶನಗೊಂಡಿರುವ ಪ್ರೊ.ಮುಜಾಫರ್ ಅಸ್ಸಾದಿ, ರಾಜ್ಯಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು ಸಭೆಗೆ ಸ್ವಾಗತಿಸಿ ಪರಿಚಯಿಸಲಾಯಿತು.

**ನಂತರ ಕುಲಪತಿಯವರು ಕಾರ್ಯಸೂಚಿಯಂತೆ ವಿಷಯವನ್ನು ಸಭೆಯ ಮುಂದೆ ಮಂಡಿಸಿದರು.**

| ವಿಷಯ ಸಂಖ್ಯೆ | ವಿಷಯ ಸಂಕ್ಷಿಪ್ತವಾಗಿ |
|---|---|
| I.1 | ದಿನಾಂಕ: 14-09-2020ರಂದು ಜರುಗಿದ ಶಿಕ್ಷಣ ಮಂಡಳ ಮೊದಲನೇ ಸಾಮಾನ್ಯ ಸಭೆಯ ನಡವಳಿಗಳನ್ನು ದೃಢೀಕರಿಸುವ ಬಗ್ಗೆ. |
| **ತೀರ್ಮಾನ** | ದಿನಾಂಕ: 14-09-2020ರಂದು ಜರುಗಿದ ಶಿಕ್ಷಣ ಮಂಡಳ ಮೊದಲನೇ ಸಾಮಾನ್ಯ ಸಭೆಯ ನಡವಳಿಗಳನ್ನು ದೃಢೀಕರಿಸಲಾಯಿತು. |
| I.2 | ದಿನಾಂಕ: 07-10-2020ರಂದು ಜರುಗಿದ ಶಿಕ್ಷಣ ಮಂಡಳ ವಿಶೇಷ ಸಭೆಯ ನಡವಳಿಗಳನ್ನು ದೃಢೀಕರಿಸುವ ಬಗ್ಗೆ. |
| **ತೀರ್ಮಾನ** | ದಿನಾಂಕ: 07-10-2020ರಂದು ಜರುಗಿದ ಶಿಕ್ಷಣ ಮಂಡಳ ವಿಶೇಷ ಸಭೆಯ ನಡವಳಿಗಳನ್ನು ದೃಢೀಕರಿಸಲಾಯಿತು. |

| | |
|---|---|
| I.3 | ದಿನಾಂಕ: 19-10-2020ರಂದು 100ನೇ ವಾರ್ಷಿಕ ಘಟಿಕೋತ್ಸವದ ಪೂರ್ವಭಾವಿಯಾಗಿ ನಡೆದ ಶಿಕ್ಷಣ ಮಂಡಳಿ ವಿಶೇಷ ಸಭೆಯ ನಡವಳಿಗಳನ್ನು ದೃಢೀಕರಿಸುವ ಬಗ್ಗೆ. |
| **ತೀರ್ಮಾನ** | ದಿನಾಂಕ: 19-10-2020ರಂದು 100ನೇ ವಾರ್ಷಿಕ ಘಟಿಕೋತ್ಸವದ ಪೂರ್ವಭಾವಿಯಾಗಿ ನಡೆದ ಶಿಕ್ಷಣ ಮಂಡಳಿ ವಿಶೇಷ ಸಭೆಯ ನಡವಳಿಗಳನ್ನು ದೃಢೀಕರಿಸಲಾಯಿತು. |
| II.1 | 2021-22ನೇ ಶೈಕ್ಷಣಿಕ ಸಾಲಿಗೆ ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಬರುವ ಮೈಸೂರು, ಚಾಮರಾಜನಗರ, ಮಂಡ್ಯ ಮತ್ತು ಹಾಸನ ಜಿಲ್ಲೆಗಳಲ್ಲಿ ಹೊಸದಾಗಿ ಪ್ರಥಮ ದರ್ಜೆ ಕಾಲೇಜುಗಳನ್ನು ಪ್ರಾರಂಭಿಸಲು, ಅಸ್ತಿತ್ವದಲ್ಲಿರುವ ಸಂಯೋಜಿತ ಕಾಲೇಜುಗಳಲ್ಲಿ ಸಂಯೋಜನೆ ನವೀಕರಣ, ಶಾಶ್ವತ ಸಂಯೋಜನೆ ಹೊಂದಿರುವ ಕಾಲೇಜುಗಳ ಸಂಯೋಜನೆ ನವೀಕರಣ, ಕಾಲೇಜುಗಳಲ್ಲಿ ಹೊಸ ವ್ಯಾಸಾಂಗ ಕ್ರಮಗಳನ್ನು ಪ್ರಾರಂಭಿಸಲು, ಹಾಲಿ ಇರುವ ಪ್ರವೇಶಾತಿ ಮಿತಿಯಲ್ಲಿ ಹೆಚ್ಚುವರಿ ಪ್ರವೇಶಾತಿ ನೀಡಲು, ಪ್ರಥಮ ದರ್ಜೆ ಕಾಲೇಜುಗಳಲ್ಲಿ ಇರುವ ಸ್ನಾತಕೋತ್ತರ ಕೋರ್ಸುಗಳ ಸಂಯೋಜನೆ ನವೀಕರಿಸುವ, ಶಿಕ್ಷಣ ಕಾಲೇಜುಗಳ ಸಂಯೋಜನೆ ನವೀಕರಿಸಲು ಮತ್ತು ಹೊಸದಾಗಿ ಸ್ನಾತಕೋತ್ತರ ಕೋರ್ಸುಗಳನ್ನು ಪ್ರಾರಂಭಿಸುವ ಸಲುವಾಗಿ ಸ್ಥಳೀಯ ವಿಚಾರಣಾ ಸಮಿತಿಯನ್ನು ರಚಿಸುವ ಕುರಿತು. |
| | ಮಾನ್ಯ ಕುಲಪತಿಯವರು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಬರುವ ಮೈಸೂರು, ಚಾಮರಾಜನಗರ, ಮಂಡ್ಯ ಮತ್ತು ಹಾಸನ ಜಿಲ್ಲೆಗಳಲ್ಲಿರುವ ಪ್ರಥಮ ದರ್ಜೆ ಕಾಲೇಜುಗಳಿಂದ ಸಂಯೋಜನೆ ನವೀಕರಣಕ್ಕಾಗಿ, ಹೊಸ ಕೋರ್ಸು, ಭಾಷೆ, ವಿಷಯಗಳು, ವಿದ್ಯಾರ್ಥಿ ಪ್ರಮಾಣದ ಹೆಚ್ಚಳ ಹಾಗೂ ನಾಲ್ಕು ಜಿಲ್ಲೆಗಳಲ್ಲಿ ಹೊಸದಾಗಿ ಪ್ರಥಮ ದರ್ಜೆ ಕಾಲೇಜನ್ನು ಪ್ರಾರಂಭಿಸಲು ಉದ್ದೇಶಿಸಿರುವ ಸಂಸ್ಥೆಗಳಿಂದ ಮತ್ತು ಅಸ್ತಿತ್ವದಲ್ಲಿರುವ 5 ವರ್ಷ ಸತತ ಸಂಯೋಜನೆ ನವೀಕರಿಸಿರುವ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಹೊಸದಾಗಿ ಸ್ನಾತಕೋತ್ತರ ಕೋರ್ಸುಗಳನ್ನು ಪ್ರಾರಂಭಿಸಲು, ಶಿಕ್ಷಣ ಹಾಗೂ ದೈಹಿಕ ಶಿಕ್ಷಣ ಕಾಲೇಜುಗಳ ಸಂಯೋಜನೆಯನ್ನು ನವೀಕರಿಸಲು, ಕಾಲೇಜನ್ನು ಹೊಸದಾಗಿ ಪ್ರಾರಂಭಿಸುವ ಸಂಸ್ಥೆಗಳಿಂದ ಸಂಯೋಜನಾ ಅರ್ಜಿಗಳನ್ನು ಸ್ವೀಕರಿಸಲು ಪತ್ರಿಕೆಗಳಲ್ಲಿ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯದ ಅಧಿನಿಯಮ 2000 ಪ್ರಕರಣ 59(2) ರನ್ವಯ ಪ್ರಕಟಣೆಯನ್ನು ನೀಡಿ ದಿನಾಂಕ 01.08.2020 ರಿಂದ 31.09.2020ರವರೆಗೆ ದಂಡಶುಲ್ಕವಿಲ್ಲದೆ ಹಾಗೂ 01.10.2020 ರಿಂದ 12.10.2020ರವರೆಗೆ ದಂಡಶುಲ್ಕದೊಡನೆ ಕಾಲಾವಕಾಶ ನೀಡಿ ಸಂಯೋಜನಾ ಅರ್ಜಿಗಳನ್ನು ಸ್ವೀಕರಿಸಲಾಗಿದೆ.<br><br>ಪ್ರಕಟಣೆಯಲ್ಲಿ ಸರ್ಕಾರದ ಕಾಲೇಜುಗಳಿಗೆ ಸಂಯೋಜನೆ ಕೋರಿ ಅರ್ಜಿ ಸಲ್ಲಿಸುವಾಗ ಸಂಯೋಜನಾ ಶುಲ್ಕದಲ್ಲಿ ಪೂರ್ಣ ವಿನಾಯಿತಿ ನೀಡಲಾಗಿದೆ. ಈ ಕಾಲೇಜುಗಳು ಹೊಸ ಕೋರ್ಸು, ಭಾಷೆ, ವಿಷಯಗಳನ್ನು ಪ್ರಾರಂಭಿಸಲು ಸರ್ಕಾರದ ಶಿಕ್ಷಣ ಇಲಾಖೆಯ ಪೂರ್ವಾನುಮತಿ ಪಡೆದು ನಂತರ ಸಂಯೋಜನೆಗೆ ಅರ್ಜಿ ಸಲ್ಲಿಸಬಹುದಾಗಿದೆ.<br><br>ವಿಶ್ವವಿದ್ಯಾನಿಲಯದ ಅಧಿಸೂಚನೆಯಂತೆ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಆಡಳಿತ ಮಂಡಳಿಯವರು ನಡೆಸುತ್ತಿರುವ ಖಾಸಗೀ ಕಾಲೇಜುಗಳವರಿಗೆ ಮತ್ತು ಶಿಕ್ಷಣ ಸಂಸ್ಥೆಗಳಿಗೆ ಸಂಯೋಜನಾ ಶುಲ್ಕದಲ್ಲಿ ಶೇ.50ರಷ್ಟು ರಿಯಾಯಿತಿಯನ್ನು ನೀಡಲಾಗಿದೆ. ಸರ್ಕಾರದ ಆದೇಶ ಸಂಖ್ಯೆ ಇಡಿ 21 ಯುಬಿವಿ 2004 ಬೆಂಗಳೂರು ದಿನಾಂಕ 15.05.2004 ಆದೇಶದನ್ವಯ, ಸಂಯೋಜಿತ ಕಾಲೇಜಿನವರು ಹಾಗೂ ನೋಂದಾಯಿತ ಶಿಕ್ಷಣ ಸಂಸ್ಥೆಯವರು ವಿಶ್ವವಿದ್ಯಾನಿಲಯವು ನಿಗದಿಪಡಿಸಿರುವ ಶುಲ್ಕದೊಡನೆ ಸಂಯೋಜನೆಯನ್ನು ಮುಂದುವರೆಸಲು ಹಾಗೂ ಹೊಸದಾಗಿ ಕಾಲೇಜನ್ನು ಪ್ರಾರಂಭಿಸಲು ಕೋರಿ ಅರ್ಜಿಯನ್ನು ಸಲ್ಲಿಸಿರುತ್ತಾರೆ.<br><br>ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000 ಅಧ್ಯಾಯ 10 ಪ್ರಕರಣ 59 (6) (2) ನೇ ಉಪಪ್ರಕರಣದಡಿಯಲ್ಲಿ ಅರ್ಜಿಗಳನ್ನು ಸ್ವೀಕರಿಸಿದ ತರುವಾಯ ಪ್ರಕರಣ 59 (6) (2) ಪ್ರಕಾರ ಅದನ್ನು ಪರಿಶೀಲನೆಗಾಗಿ ಸಿಂಡಿಕೇಟ್ ಸಭೆಯ ಮುಂದೆ ಮಂಡಿಸಬೇಕಾಗಿರುತ್ತದೆ. ತರುವಾಯ ಸ್ಥಳೀಯ ವಿಚಾರಣಾ ಸಮಿತಿಯಿಂದ ವಿಚಾರಣೆಗೆ ನಿರ್ದೇಶನ ನೀಡಬಹುದಾಗಿದೆ. ಸ್ಥಳೀಯ ವಿಚಾರಣಾ ಸಮಿತಿಯಲ್ಲಿ ಕನಿಷ್ಠ ಪಕ್ಷ ಪರಿಶಿಷ್ಟ |

ಜಾತಿ/ಪರಿಶಿಷ್ಟ ಪಂಗಡ ವರ್ಗದ ಒಬ್ಬರು ಸದಸ್ಯರನ್ನು ಒಳಗೊಂಡಿರಬೇಕಾಗಿದೆ. ಹೊಸ ಕಾಲೇಜನ್ನು ಪ್ರಾರಂಭಿಸಲು ಸಂಯೋಜನೆ ನೀಡುವಲ್ಲಿ ವಿಶ್ವವಿದ್ಯಾನಿಲಯದ ಕಾರ್ಯಪಾಲಕ ಅಭಿಯಂತರರೊಳಗೊಂಡಂತೆ ಸಮಿತಿಯನ್ನು ರಚಿಸಿ ಸಂಸ್ಥೆಯ ಆರ್ಥಿಕ ಸುಭದ್ರತೆ, ಪೂರಕವಾಗುವ ಇತರ ಶಿಕ್ಷಣ ಸಂಸ್ಥೆಗಳು, ವಿದ್ಯಾರ್ಹತೆಯುಳ್ಳ ಶಿಕ್ಷಕರು ಹಾಗೂ ಇನ್ನಿತರ ಮೂಲಭೂತ ಸೌಕರ್ಯಗಳನ್ನು ಗಮನಿಸಬೇಕಾಗಿರುತ್ತದೆ.

ಸ್ನಾತಕೋತ್ತರ ಕೋರ್ಸುಗಳನ್ನು ಪ್ರಾರಂಭಿಸಲು ಇಚ್ಛಿಸುವ ಪದವಿ ಕಾಲೇಜುಗಳು ಸರ್ಕಾರದ ಪತ್ರ ಸಂಖ್ಯೆ ಇಡಿ 107 ಯು.ಆರ್.ಸಿ ದಿನಾಂಕ 21-08-2016 ರಂದು "Draft Guidelines for promoting research in the colleges which offering PG Programmes in affiliated colleges" ಈ ಮಾರ್ಗಸೂಚಿಯ ಪ್ರಕಾರ ಹಾಲಿ ನಡೆಸುತ್ತಿರುವ ಸ್ನಾತಕೋತ್ತರ ಕೋರ್ಸು ಕಾಲೇಜುಗಳಿಗೆ ಮತ್ತು ಹೊಸದಾಗಿ ಪ್ರಾರಂಭಿಸಬೇಕೆಂದಿರುವ ಕಾಲೇಜುಗಳ ಅವಗಾಃನೆಗೆ ತರಲಾಗಿದೆ. ಪ್ರಥಮ ದರ್ಜೆ ಕಾಲೇಜಿನಲ್ಲಿ ಹೊಸದಾಗಿ ಸ್ನಾತಕೋತ್ತರ ಕೋರ್ಸನ್ನು ಪ್ರಾರಂಭಿಸಲು ಸಂಯೋಜನೆ ನೀಡುವಲ್ಲಿ ಸ್ಥಳೀಯ ವಿಚಾರಣಾ ಸಮಿತಿಯು ಎರಡು ಬಾರಿ ಪರಿಶೀಲನೆ ನಡೆಸಬೇಕಾಗಿರುತ್ತದೆ. (1. ಸಾಧ್ಯತಾ ಪರಿಶೀಲನಾ ಸಮಿತಿ, 2. ಅಂತಿಮ ಸ್ಥಳೀಯ ತನಿಖಾ ಸಮಿತಿ)

ಸಂಪೂರ್ಣ ಶಾಶ್ವತ ಸಂಯೋಜನೆ ಪಡೆದಿರುವ ಕಾಲೇಜುಗಳ ಪರಿಶೀಲನಾ ಕಾರ್ಯವನ್ನು ಶಾಶ್ವತ ಸಂಯೋಜನೆ ಪರಿನಿಯಮಾವಳಿಯನ್ವಯ ಮೂರು ವರ್ಷಕ್ಕೊಮ್ಮೆ ಪರಿಶೀಲನೆ ನಡೆಸಬೇಕಾಗಿರುತ್ತದೆ. ಈ ಸಂಬಂಧ 2020-21ನೇ ಶೈಕ್ಷಣಿಕ ಸಾಲಿನಲ್ಲಿ ಶಾಶ್ವತ ಸಂಯೋಜನೆ ಹೊಂದಿರುವ ಕಾಲೇಜುಗಳಿಗೆ ಸಮಿತಿಯು ಭೇಟಿ ನೀಡಿರುತ್ತದೆ.

ಸ್ವಾಯತ್ತತಾ ಸ್ಥಾನಮಾನ ಹೊಂದಿರುವ ಕಾಲೇಜುಗಳನ್ನು ಹೊರತು ಪಡಿಸಿ ಇತರ ಎಲ್ಲಾ ಸಂಯೋಜಿತ ಪ್ರಥಮ ದರ್ಜೆ ಕಾಲೇಜುಗಳು ಮತ್ತು ಪ್ರಥಮ ದರ್ಜೆ ಕಾಲೇಜುಗಳಲ್ಲಿರುವ ಸ್ನಾತಕೋತ್ತರ ಕೋರ್ಸುಗಳು, ಶಿಕ್ಷಣ ಕಾಲೇಜುಗಳ ಮುಂದುವರಿಕೆ ಮತ್ತು ಮೈಸೂರು, ಮಂಡ್ಯ, ಚಾಮರಾಜನಗರ ಮತ್ತು ಹಾಸನ ಜಿಲ್ಲೆಗಳಲ್ಲಿ ಹೊಸದಾಗಿ ಪ್ರಥಮ ದರ್ಜೆ ಕಾಲೇಜುಗಳನ್ನು ಪ್ರಾರಂಭಿಸಲು ಉದ್ದೇಶಿಸಿರುವ ಸಂಸ್ಥೆಗಳ ಮತ್ತು ಹೊಸ ಸ್ನಾತಕೋತ್ತರ ಕೋರ್ಸುಗಳನ್ನು ಪ್ರಾರಂಭಿಸಲು ಸಲ್ಲಿಸಿರುವ ಕಾಲೇಜುಗಳ ವಿವರವನ್ನು ಈ ಕೆಳಕಂಡಂತೆ ನೀಡಲಾಗಿದೆ.

| ಕ್ರ. ಸ | ಕಾಲೇಜುಗಳ ವಿವರ | ಒಟ್ಟು ಸಂಖ್ಯೆ |
|---|---|---|
| 2021-22ನೇ ಶೈಕ್ಷಣಿಕ ಸಾಲಿಗೆ ಮುಂದುವರಿಕೆ ಸಂಯೋಜನೆ ನೀಡಲು ಸ್ಥಳೀಯ ತನಿಖಾ ಸಮಿತಿ ಕೈಗೊಳ್ಳಬೇಕಾಗಿರುವ ಕಾಲೇಜುಗಳ ಸಂಖ್ಯಾ ವಿವರ (ಘಟಕ ಕಾಲೇಜುಗಳು ಮತ್ತು ಸ್ವಾಯತ್ತ ಕಾಲೇಜುಗಳನ್ನು ಹೊರತುಪಡಿಸಿ) | | |
| 1 | ಪ್ರಥಮ ದರ್ಜೆ ಕಾಲೇಜುಗಳು | 166 |
| 2 | ಗೃಹ ವಿಜ್ಞಾನ ಕಾಲೇಜುಗಳು | 02 |
| 3 | ಶಿಕ್ಷಣ ಕಾಲೇಜುಗಳು (ಬಿ.ಎಡ್.) | 35 |
| 4 | ದೈಹಿಕ ಶಿಕ್ಷಣ ಕಾಲೇಜುಗಳು (ಬಿ.ಪಿ.ಎಡ್) | 02 |
| 5 | ವಾಕ್ ಮತ್ತು ಶ್ರವಣ ಸಂಸ್ಥೆಗಳು | 02 |
| 6 | ಹೋಟೆಲ್ ಮ್ಯಾನೇಜ್‌ಮೆಂಟ್ ಕಾಲೇಜುಗಳು | 01 |
| 7 | ಕೇಂದ್ರ ಸರ್ಕಾರದ ಸಂಸ್ಥೆಗಳು | 01 |

2021-22ನೇ ಶೈಕ್ಷಣಿಕ ಸಾಲಿನಲ್ಲಿ ಕಾಲೇಜುಗಳನ್ನು ಹೊಸದಾಗಿ ಪ್ರಾರಂಭಿಸಲು ಈ ಕೆಳಕಂಡ ಸಂಘ ಸಂಸ್ಥೆಗಳಿಂದ ಅರ್ಜಿ ಸ್ವೀಕರಿಸಲಾಗಿದೆ.

ನೊಂದಾಯಿತ ಶಿಕ್ಷಣ ಸಂಸ್ಥೆಗಳವರು/ ಟ್ರಸ್ಟ್‌ಗಳವರು ಹೊಸದಾಗಿ ಪ್ರಥಮ ದರ್ಜೆ ಕಾಲೇಜುಗಳನ್ನು ಪ್ರಾರಂಭಿಸಲು ಮತ್ತು ಸಂಯೋಜಿತ ಪ್ರಥಮ ದರ್ಜೆ ಕಾಲೇಜುಗಳವರು 2021-22ನೇ ಶೈಕ್ಷಣಿಕ ವರ್ಷದಿಂದ ಹೊಸದಾಗಿ ಸ್ನಾತಕೋತ್ತರ ಕೋರ್ಸುಗಳನ್ನು ಪ್ರಾರಂಭಿಸಲು ಸಂಯೋಜನೆಯನ್ನು ಕೋರಿ ಈ ಕೆಳಗೆ ತಿಳಿಸಿರುವಂತೆ ಅರ್ಜಿಯನ್ನು ಸಲ್ಲಿಸಿರುತ್ತಾರೆ.

| | | |
|---|---|---|
| 1 | ಹೊಸ ಪ್ರಥಮ ದರ್ಜೆ ಕಾಲೇಜು | 01 |
| 2 | ಹೊಸ ಸ್ನಾತಕೋತ್ತರ ಕೋರ್ಸ್‌ಗಳು | NIL |

2021-22ನೇ ಸಾಲಿಗೆ ಹೊಸದಾಗಿ ಪ್ರಥಮ ದರ್ಜೆ ಕಾಲೇಜುಗಳನ್ನು ಪ್ರಾರಂಭಿಸಲು ಅರ್ಜಿ ಸಲ್ಲಿಸಿರುವ ಸಂಘ ಸಂಸ್ಥೆಗಳ ವಿವರ ಈ ಕೆಳಕಂಡಂತಿದೆ.

| ಕ್ರ. ಸಂ | ಅರ್ಜಿ ಸಲ್ಲಿಸಿರುವ ಸಂಸ್ಥೆಯ ಹೆಸರು | ಪ್ರಾರಂಭಿಸಲು ಉದ್ದೇಶಿಸಿರುವ ಕಾಲೇಜಿನ ಹೆಸರು | ಪ್ರಾರಂಭಿಸ ಬೇಕೆಂದಿರುವ ಕೋರ್ಸುಗಳು |
|---|---|---|---|
| 1 | ಅಕ್ಯಾಡಮಿ ಫಾರ್ ಟೆಕ್ನಿಕಲ್ ಅಂಡ್ ಮ್ಯಾನೇಜ್‌ಮೆಂಟ್ ಎಕ್ಸ್‌ಲೆನ್ಸ್ (ರಿ), ಮೈಸೂರು | ಸಮಗ್ರ ಅಕ್ಯಾಡಮಿ ಫಾರ್ ಹಯರ್ ಎಜುಕೇಷನ್ ಮತ್ತು ಇನೋವೇಷನ್, ಮೈಸೂರು | B.Com - 60<br>BCA - 60 |

2021-22ನೇ ಶೈಕ್ಷಣಿಕ ಸಾಲಿಗೆ ಹೊಸದಾಗಿ ಪ್ರಾರಂಭಿಸಬೇಕೆಂದಿರುವ ಸ್ನಾತಕೋತ್ತರ ಕೋರ್ಸುಗಳ ವಿವರ

| | |
|---|---|
| 1 | NIL |

1. ಹೊಸದಾಗಿ ಪ್ರಾರಂಭಿಸುವ ಪ್ರತಿಯೊಂದು ಸ್ನಾತಕೋತ್ತರ ವಿಷಯಕ್ಕೆ ಸಮಿತಿಯಲ್ಲಿ ಬಾಹ್ಯ ವಿಷಯ ತಜ್ಞರೊಬ್ಬರ ನೇಮಕವಾಗಬೇಕಿದೆ.
2. ಮೊದಲ ಹಂತದಲ್ಲಿ ಸಾಧ್ಯತಾ ಪರಿಶೀಲನಾ ಸಮಿತಿಯು ಭೇಟಿ ನೀಡಿ ಸಂವೀಕ್ಷಿಸಿ ವರದಿಯಲ್ಲಿ ನೀಡಿರುವ ಷರತ್ತಿಗೆ ಅನುಪಾಲನಾ ವರದಿ ಪಡೆದ ನಂತರ ಎರಡನೇ ಹಂತದಲ್ಲಿ ಸ್ಥಳೀಯ ವಿಚಾರಣಾ ಸಮಿತಿಯ ಅನುಪಾಲನಾ ವರದಿ ಆಧರಿಸಿ, ಪರಿಶೀಲಿಸಿ ವರದಿ ನೀಡಬೇಕಾಗುವುದು.

**2021-22ನೇ ಶೈಕ್ಷಣಿಕ ಸಾಲಿಗೆ ಈ ಕೆಳಕಂಡ ಕಾಲೇಜಿನವರು ಸಂಯೋಜನೆ ಮುಂದುವರಿಕೆ ಕೋರಿ ಅರ್ಜಿ ಸಲ್ಲಿಸಿಲ್ಲದ ಕಾರಣ ಸಮಿತಿಯು ಭೇಟಿ ನೀಡುವ ಅಗತ್ಯವಿರುವುದಿಲ್ಲ.**

**ಪ್ರಥಮ ದರ್ಜೆ ಕಾಲೇಜುಗಳು**

| | | |
|---|---|---|
| 1 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ತೆರಕಣಾಂಬಿ | ಈ ಎರಡು ಕಾಲೇಜುಗಳನ್ನು ವಿಶ್ವವಿದ್ಯಾನಿಲಯ ಘಟಕ ಕಾಲೇಜುಗಳಾಗಿ ಮಾರ್ಪಾಡು ಮಾಡಲು ಪರಿಶೀಲನೆಯಲ್ಲಿದೆ |
| 2 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೆತ್ತೂರು | |

| | |
|---|---|
| 1 ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹರೆಹಳ್ಳಿ<br>2 ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹಳ್ಳಿ ಮೈಸೂರು | ಸರ್ಕಾರದ ಆದೇಶದಂತೆ ಈ ಎರಡು ಈ ಎರಡು ಕಾಲೇಜುಗಳನ್ನು ಬೇರೆ ಕಡೆಗೆ ಸ್ಥಳಾಂತರಿಸಲಾಗಿದೆ |

**ಶಿಕ್ಷಣ ಕಾಲೇಜುಗಳು**

| | |
|---|---|
| 1 ವಾತ್ಸಲ್ಯ ಶಿಕ್ಷಣ ಕಾಲೇಜು, ಮೈಸೂರು<br>2 ಗುರುಕುಲ ಶಿಕ್ಷಣ ಮಹಾವಿದ್ಯಾಲಯ, ಮೈಸೂರು<br>3 ಯಡತೊರೆ ಶಿಕ್ಷಣ ಕಾಲೇಜು, ಕೆ.ಆರ್.ನಗರ<br>4 ವಿಜಯ ಶಿಕ್ಷಣ ಕಾಲೇಜು, ಪಾಂಡವಪುರ<br>5 ಮೌಲನಾ ಅಜಾದ್ ಶಿಕ್ಷಣ ಕಾಲೇಜು, ಮೈಸೂರು | ಎನ್.ಸಿ.ಟಿ.ಇ ಮಾನ್ಯತೆ ಹಿಂಪಡೆಯಲಾಗಿದೆ |

ಸಂಯೋಜನೆ ಕಾರ್ಯಕ್ಕಾಗಿ ರಚಿಸಬೇಕಾದ ಒಟ್ಟು ಸಮಿತಿಗಳ ವಿವರಗಳನ್ನು ಈ ಕೆಳಕಂಡಂತೆ ಮಂಡಿಸಲಾಗಿದೆ.

| ಕ್ರಮ ಸಂಖ್ಯೆ | ಕಾಲೇಜುಗಳ ವಿವರ | ಒಟ್ಟು ಸಂಖ್ಯೆ | ರಚಿಸಬೇಕಾದ ಒಟ್ಟು ಸಮಿತಿಗಳು |
|---|---|---|---|
| 1 | ಪ್ರಥಮ ದರ್ಜೆ ಕಾಲೇಜುಗಳು ಮತ್ತು ಶಾಶ್ವತ ಸಂಯೋಜನೆ ಪಡೆದಿರುವ ಕಾಲೇಜುಗಳು | 166 | 40 |
| 2 | ಗೃಹ ವಿಜ್ಞಾನ ಕಾಲೇಜು | 02 | 01<br>ಸಂಬಂಧಿಸಿದ ವಿಷಯದ ಪ್ರಾಧ್ಯಾಪಕರು, ಎಸ್.ಸಿ./ಎಸ್.ಟಿ. ಸದಸ್ಯರನ್ನೊಳಗೊಂಡಂತೆ |
| 3 | ಹೊಟೆಲ್ ಮ್ಯಾನೇಜ್‌ಮೆಂಟ್ ಕಾಲೇಜುಗಳು | 01 | |
| 4 | ವಾಕ್ ಮತ್ತು ಶ್ರವಣ ಸಂಸ್ಥೆಗಳು | 02 | 01 |
| 5 | ಕೇಂದ್ರ ಸರ್ಕಾರದ ಸಂಸ್ಥೆಗಳು | 02 | 01 |
| 6 | ಶಿಕ್ಷಣ ಕಾಲೇಜುಗಳು (ಬಿ.ಎಡ್.) ಶಾಶ್ವತ ಸಂಯೋಜನೆ ಪಡೆದಿರುವ ಕಾಲೇಜುಗಳು | 35 | 08 |
| 7 | ದೈಹಿಕ ಶಿಕ್ಷಣ ಕಾಲೇಜುಗಳು (ಬಿ.ಪಿ.ಎಡ್., ಎಂ.ಪಿ.ಎಡ್.) | 02 | 01 |

ಸ್ನಾತಕೋತ್ತರ ಕೋರ್ಸುಗಳಿಗೆ ಸಂಯೋಜನೆ ಮುಂದುವರೆಸಲು ಕೋರ್ಸುಗಳ ವಿವರ ಈ ಕೆಳಕಂಡಂತೆ ಇದೆ.

<u>ಕಲಾ ವಿಭಾಗ</u>

| ಕ್ರ. ಸಂ. | ಸ್ನಾತಕೋತ್ತರ ಕೋರ್ಸುಗಳು | ಕಾಲೇಜುಗಳಲ್ಲಿರುವ ಸ್ನಾತಕೋತ್ತರ ಕೋರ್ಸುಗಳ ಸಂಖ್ಯೆ | ಹೊಸದಾಗಿ ಪ್ರಾರಂಭಿಸಲು ಉದ್ದೇಶಿಸಿರುವ ಸ್ನಾತಕೋತ್ತರ ಕೋರ್ಸುಗಳ ಸಂಖ್ಯೆ | ಒಟ್ಟು | ರಚಿಸಬೇಕಾದ ಸ್ಥಳೀಯ ತನಿಖಾ ಸಮಿತಿಗಳ ವಿವರ |
|---|---|---|---|---|---|
| 1 | M.A.-Kannada | 09 | – | 09 | ಕಲಾ ನಿಕಾಯದ ಡೀನರು ಅಥವಾ ಹಿರಿಯ ಪ್ರಾಧ್ಯಾಪಕರು ಅಧ್ಯಕ್ಷರು ಆಗಿರುತ್ತಾರೆ. ಮತ್ತು ವಿಷಯಪರಿಣಿತರು ಎಸ್.ಸಿ. / ಎಸ್.ಟಿ. ಸದಸ್ಯರ ಪ್ರತಿನಿಧಿಯನ್ನೊಳಗೊಂಡಂತೆ ಸಮಿತಿ ರಚಿಸಬೇಕಾಗಿರುತ್ತದೆ. ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿರವರು ಸದಸ್ಯ ಕಾರ್ಯದರ್ಶಿಯಾಗಿರುತ್ತಾರೆ. |
| 2 | M.A.-English | 02 | – | 03 | |
| 3 | M.A.-History | 05 | – | 05 | |
| 4 | M.A.-Economics | 05 | – | 05 | |
| 5 | M.A.-Political Science | 04 | – | 04 | |
| 6 | M.A.-Sociology | 01 | – | 01 | |
| 7 | Mass Communication and Journalism | 01 | – | 01 | |
| 8 | M.A.-Women Studies | 01 | – | 01 | |
| 9 | M.S.W. | 05 | – | 05 | |
| 10 | M.Lib.Sc. | 01 | – | 01 | |
| 11 | M.F.A. | 01 | – | 01 | |

<u>ವಿಜ್ಞಾನ ವಿಭಾಗ</u>

| | | | | | |
|---|---|---|---|---|---|
| 12 | M.Sc.-Physics | 03 | – | 03 | ವಿಜ್ಞಾನ ನಿಕಾಯದ ಡೀನರು ಅಥವಾ ಹಿರಿಯ ಪ್ರಾಧ್ಯಾಪಕರು ಅಧ್ಯಕ್ಷರು ಆಗಿರುತ್ತಾರೆ. ಮತ್ತು ವಿಷಯಪರಿಣಿತರು ಎಸ್.ಸಿ. /ಎಸ್.ಟಿ. ಸದಸ್ಯರ ಪ್ರತಿನಿಧಿಯನ್ನೊಳ ಗೊಂಡಂತೆ ಸಮಿತಿ ರಚಿಸಬೇಕಾಗಿರುತ್ತದೆ. |
| 13 | M.Sc.-Chemistry | 05 | – | 05 | |
| 14 | M.Sc.-Biotechnology | 02 | – | 02 | |
| 15 | M.Sc.-Mathematics | 06 | – | 06 | |
| 16 | M.Sc.-Computer Science | 01 | – | 01 | |
| 17 | M.Sc.-Geography | 01 | – | 01 | |

| | | | | | |
|---|---|---|---|---|---|
| 18 | M.Sc.-Psychology | 02 | – | 02 | ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿರವರು ಸದಸ್ಯ ಕಾರ್ಯದರ್ಶಿ ಯಾಗಿರುತ್ತಾರೆ |
| 19 | M.Sc.- Food Science and Nutrition | 01 | – | 01 | |
| 20 | M.Sc.-Speech & Hg. | 01 | – | 01 | ವಿಜ್ಞಾನ ನಿಕಾಯದ ಡೀನರು ಅಥವಾ ಹಿರಿಯ ಪ್ರಾಧ್ಯಾಪಕರು ಅಧ್ಯಕ್ಷರು ಆಗಿರುತ್ತಾರೆ. ಮತ್ತು ವಿಷಯಪರಿಣಿತರು ಎಸ್.ಸಿ. /ಎಸ್.ಟಿ. ಸದಸ್ಯರ ಪ್ರತಿನಿಧಿಯನ್ನೊಳ ಗೊಂಡಂತೆ ಸಮಿತಿ ರಚಿಸಬೇಕಾಗಿರುತ್ತದೆ. ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿರವರು ಸದಸ್ಯ ಕಾರ್ಯದರ್ಶಿ–ಯಾಗಿರುತ್ತಾರೆ |
| 21 | M.Sc.-Audiology | 02 | – | 02 | |
| 22 | M.Sc.-Sp. Lang.Path | 02 | – | 02 | |
| 23 | M.S.Ed.-Hearing Impairment | 01 | – | 01 | |
| 24 | PG Dip. in Forensic Sciences & Tech (AIISH) | 01 | – | 01 | |
| 25 | PG Dip. in Clinical Linguistics (AIISH) | 01 | – | 01 | |
| 26 | PG Dip. in Neuro Audiology (AIISH) | 01 | – | 01 | |
| 27 | PG Dip. in Augmentative and Alternative Communication Disorders (AIISH) | 01 | – | 01 | |

<u>ವಾಣಿಜ್ಯ ವಿಭಾಗ</u>

| | | | | | |
|---|---|---|---|---|---|
| 28 | M.Com. | 34 | | 34 | ವಾಣಿಜ್ಯ ನಿಕಾಯದ ಡೀನರು ಅಥವಾ ಹಿರಿಯ ಪ್ರಾಧ್ಯಾಪಕರು ಅಧ್ಯಕ್ಷರು ಆಗಿರುತ್ತಾರೆ. ಮತ್ತು ವಿಷಯಪರಿಣಿತರು ಎಸ್.ಸಿ. /ಎಸ್.ಟಿ. ಸದಸ್ಯರ ಪ್ರತಿನಿಧಿಯನ್ನೊಳಗೊಂಡಂತೆ ಸಮಿತಿ ರಚಿಸಬೇಕಾಗಿರುತ್ತದೆ ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿರವರು ಸದಸ್ಯ ಕಾರ್ಯದರ್ಶಿ-ಯಾಗಿರುತ್ತಾರೆ. |
| 29 | MBA | 02 | – | 02 | |

<u>**ಶಿಕ್ಷಣ ವಿಭಾಗ**</u>

| | | | | | |
|---|---|---|---|---|---|
| 30 | M.Ed. / M.Sc.Ed./- B.Ed. B.A.Ed./ B.Sc.Ed. (P.A.) | 37 | – | 37 | ಶಿಕ್ಷಣ ನಿಕಾಯದ ಡೀನರು ಅಥವಾ ಹಿರಿಯ ಪ್ರಾಧ್ಯಾಪಕರು ಅಧ್ಯಕ್ಷರು ಆಗಿರುತ್ತಾರೆ. ಮತ್ತು ವಿಷಯಪರಿಣಿತರು ಎಸ್.ಸಿ. /ಎಸ್.ಟಿ. ಸದಸ್ಯರ ಪ್ರತಿನಿಧಿಯನ್ನೊಳ ಗೊಂಡಂತೆ ಸಮಿತಿ ರಚಿಸಬೇಕಾಗಿರುತ್ತದೆ. ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿರವರು ಸದಸ್ಯ ಕಾರ್ಯದರ್ಶಿ-ಯಾಗಿರುತ್ತಾರೆ. |

ಹೊಸ ಪಿ.ಜಿ. ಕೋರ್ಸುಗಳಿಗೆ ವಿಶ್ವವಿದ್ಯಾನಿಲಯದ ವಿಷಯವಾರು ನಿಕಾಯದ ಡೀನರು, ಪ್ರಾಧ್ಯಾಪಕರು, ಬಾಹ್ಯ ವಿಷಯ ಪರಿಣಿತರು, ಸಿ.ಡಿ.ಸಿ. ನಿರ್ದೇಶಕರು, ಇವರನ್ನೊಳಗೊಂಡಂತೆ ಸಮಿತಿ ರಚಿಸಲಾಗುವುದೆಂದು ಸಭೆಯಲ್ಲಿ ಮಂಡಿಸಿ, ಈ ಪ್ರಸ್ತಾವನೆಗಳಿಗೆ ಶಿಕ್ಷಣ ಮಂಡಳಿ ಸಭೆಯು ಅನುಮೋದನೆ ನೀಡಬೇಕೆಂದು ತಿಳಿಸಿದರು.

| | |
|---|---|
| **ತೀರ್ಮಾನ** | 2021-22ನೇ ಶೈಕ್ಷಣಿಕ ಸಾಲಿಗೆ ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಬರುವ ಮೈಸೂರು, ಚಾಮರಾಜನಗರ, ಮಂಡ್ಯ ಮತ್ತು ಹಾಸನ ಜಿಲ್ಲೆಗಳಲ್ಲಿ ಹೊಸದಾಗಿ ಪ್ರಥಮ ದರ್ಜೆ ಕಾಲೇಜುಗಳನ್ನು ಪ್ರಾರಂಭಿಸಲು, ಅಸ್ತಿತ್ವದಲ್ಲಿರುವ ಸಂಯೋಜಿತ ಕಾಲೇಜುಗಳ ಸಂಯೋಜನೆ ನವೀಕರಣ, ಕಾಲೇಜುಗಳಲ್ಲಿ ಹೊಸ ವ್ಯಾಸಂಗ ಕ್ರಮಗಳನ್ನು ಪ್ರಾರಂಭಿಸಲು, ಹಾಲಿ ಇರುವ ಪ್ರವೇಶಾತಿ ಮಿತಿಯಲ್ಲಿ ಹೆಚ್ಚುವರಿ ಪ್ರವೇಶಾತಿ ನೀಡಲು, ಪ್ರಥಮ ದರ್ಜೆ ಕಾಲೇಜುಗಳಲ್ಲಿ ಇರುವ ಸ್ನಾತಕೋತ್ತರ ಕೋರ್ಸುಗಳ ಸಂಯೋಜನೆ ನವೀಕರಿಸುವ, ಶಿಕ್ಷಣ ಕಾಲೇಜುಗಳ ಸಂಯೋಜನೆ ನವೀಕರಿಸಲು ಮತ್ತು ಹೊಸದಾಗಿ ಸ್ನಾತಕೋತ್ತರ ಕೋರ್ಸುಗಳನ್ನು ಪ್ರಾರಂಭಿಸುವ ಸಲುವಾಗಿ ಸ್ಥಳೀಯ ವಿಚಾರಣಾ ಸಮಿತಿಗಳನ್ನು ರಚಿಸಿ ನಿಯಮಾನುಸಾರ ಎಲ್ಲಾ ಪ್ರಕ್ರಿಯೆಗಳನ್ನು ಅನುಷ್ಠಾನಗೊಳಿಸುವ ಅಧಿಕಾರವನ್ನು ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಲು ಶಿಕ್ಷಣ ಮಂಡಳಿ ಸಭೆಯು ನಿರ್ಣಯಿಸಿತು. |
| II.2 | 'ಶ್ರೀರಾಮುಲು-ಯಶೋದಮ್ಮ' ಸ್ಮರಣಾರ್ಥ ಚಿನ್ನದ ಪದಕ ದತ್ತಿಗಳನ್ನು ಸ್ಥಾಪನೆ ಮಾಡುವ ಬಗ್ಗೆ. |
| | ಮಾನ್ಯ ಕುಲಪತಿಗಳು ಮಾತನಾಡಿ, ಡಾ.ಎಸ್.ಗುರುಸ್ವಾಮಿ, ಕುಮಾರಸ್ವಾಮಿ ಲೇಔಟ್, ಬೆಂಗಳೂರು ಇವರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ "ಶ್ರೀರಾಮುಲು-ಯಶೋದಮ್ಮ" ಇವರ ಸ್ಮರಣಾರ್ಥ ಮುಂಬರುವ ಘಟಿಕೋತ್ಸವದಲ್ಲಿ ದಾನಿಗಳು ದತ್ತಿಯ ನಿಬಂಧನೆಯಲ್ಲಿ ತಿಳಿಸಿರುವಂತೆ ಚಿನ್ನದ ಪದಕ ಸ್ಥಾಪಿಸಲು ಸ್ನಾತಕ ಪದವಿಯ ಬಿ.ಎಸ್ಸಿ ರಸಾಯನಶಾಸ್ತ್ರ ವಿಷಯಕ್ಕೆ ರೂ.2,00,000/-ಗಳನ್ನು ಹಾಗೂ ಸ್ನಾತಕೋತ್ತರ ಪದವಿಯ ಎಂ.ಎಸ್ಸಿ ರಸಾಯನಶಾಸ್ತ್ರ ವಿಷಯಕ್ಕೆ ರೂ.2,00,000/-ಗಳನ್ನು ಅಂದರೆ ಒಟ್ಟು 4,00,000/-ರೂ.ಗಳನ್ನು ನೀಡಿರುತ್ತಾರೆ. ಈ ಪ್ರಸ್ತಾವನೆಗೆ ಶಿಕ್ಷಣ ಮಂಡಳಿಯು ಅನುಮೋದಿಸಬೇಕೆಂದು ತಿಳಿಸಿದರು.<br>ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯದ ಡೀನರಾದ ಪ್ರೊ.ಜಿ.ವೆಂಕಟೇಶ್‌ಕುಮಾರ್ ಮಾತನಾಡಿ, ಸುಮಾರು 10-20 ವರ್ಷಗಳ ಹಿಂದೆ ದಾನಿಗಳು ಸ್ಥಾಪಿಸಿರುವ ದತ್ತಿಗಳು ರೂ.1,00,000/- ಹಾಗೂ ಅದಕ್ಕಿಂತ ಕಡಿಮೆ ಮೊತ್ತವಾಗಿರುವುದರಿಂದ, ದತ್ತಿಗಳಿಂದ ಬರುವ ಬಡ್ಡಿಯ ಮೊತ್ತವು ನಿರ್ದಿಷ್ಟ ಪದಕಗಳನ್ನು ನೀಡಲು ಸಾಕಾಗದಿರುವುದರಿಂದ ವಿಶ್ವವಿದ್ಯಾನಿಲಯಕ್ಕೆ ಆರ್ಥಿಕ ಹೊರೆ |

| | |
|---|---|
| | ಯಾಗುತ್ತಿದೆ. ಆದುದರಿಂದ, ವಿಶ್ವವಿದ್ಯಾನಿಲಯಕ್ಕೆ ಇದುವರೆವಿಗೂ ದತ್ತಿಗಳನ್ನು ಸ್ಥಾಪಿಸಿರುವ ದಾನಿಗಳನ್ನು ಭೇಟಿ ಮಾಡಿ, ಹೆಚ್ಚಿನ ಮೊತ್ತ ನೀಡುವಂತೆ ಕೋರಬಹುದೆಂದು ಸಲಹೆ ನೀಡಿದರು.<br><br>ಇದಕ್ಕೆ ಪ್ರತಿಕ್ರಿಯಿಸಿದ ಮಾನ್ಯ ಕುಲಪತಿಯವರು 'ಹೆಚ್ಚಿನ ದಾನಿಗಳು ಈಗಾಗಲೇ ದೈವಾಧೀನರಾಗಿರುವುದು ತಿಳಿದು ಬಂದಿರುವುದರಿಂದ ಮಾರ್ಚ್ 2021ರ ನಂತರ ಒಂದು ಸಮಿತಿಯನ್ನು ರಚಿಸಿ ಈ ಸಮಿತಿಯು ಒಂದು ತಿಂಗಳಲ್ಲಿ ವರದಿ ಸಲ್ಲಿಸುವಂತೆ ಸೂಚಿಸಲಾಗುವುದು. ತದನಂತರ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದೆಂದು' ತಿಳಿಸಿದರು. |
| **ತೀರ್ಮಾನ** | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000ರ ಅನ್ವಯ ಪ್ರಕರಣ 31(2) (IX) ಪ್ರಕಾರ ಡಾ.ಎಸ್.ಗುರುಸ್ವಾಮಿ, ಕುಮಾರಸ್ವಾಮಿ ಲೇಔಟ್, ಬೆಂಗಳೂರು ಇವರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ "ಶ್ರೀರಾಮುಲು-ಯಶೋದಮ್ಮ" ಇವರ ಸ್ಮರಣಾರ್ಥ ಸ್ನಾತಕ ಪದವಿಯ ಬಿ.ಎಸ್ಸಿ ರಸಾಯನಶಾಸ್ತ್ರ ವಿಷಯದಲ್ಲಿ ಹಾಗೂ ಸ್ನಾತಕೋತ್ತರ ಪದವಿಯ ಎಂ.ಎಸ್ಸಿ ರಸಾಯನಶಾಸ್ತ್ರ ವಿಷಯದಲ್ಲಿ ಪ್ರಥಮ ಬಾರಿಗೆ ತೇರ್ಗಡೆಯಾದ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗೆ ಚಿನ್ನದ ಪದಕ ದತ್ತಿಗಳನ್ನು ಸ್ಥಾಪನೆ ಮಾಡಲು ಶಿಕ್ಷಣ ಮಂಡಳ ಸಭೆಯು ಅನುಮೋದಿಸಿತು. |
| II.3 | ಹಾಸನ ಜಿಲ್ಲೆ ಹೊಳೆನರಸೀಪುರದ ತಾಲ್ಲೂಕಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹಳ್ಳಿ ಮೈಸೂರು ಈ ಕಾಲೇಜನ್ನು ವಿಶ್ವವಿದ್ಯಾನಿಲಯದ ಘಟಕ ಕಾಲೇಜಾಗಿ ಪ್ರಾರಂಭಿಸುವ ಕುರಿತು. |
| | ಮಾನ್ಯ ಕುಲಪತಿಯವರು ಮಾತನಾಡಿ, ಹಾಸನ ಜಿಲ್ಲೆ ಹೊಳೆನರಸೀಪುರದ ತಾಲ್ಲೂಕಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹಳ್ಳಿ ಮೈಸೂರು ಈ ಕಾಲೇಜು ಬಿ.ಎ., ಬಿ.ಕಾಂ., ಮತ್ತು ಬಿ.ಬಿ.ಎ., ಕೋರ್ಸುಗಳನ್ನು ಬೋಧನೆ ಮಾಡಲು ವಿಶ್ವವಿದ್ಯಾನಿಲಯದಿಂದ ಸಂಯೋಜನೆ ನೀಡಲಾಗಿರುತ್ತದೆ. ಸದರಿ ಕಾಲೇಜನ್ನು ಸರ್ಕಾರವು ಆಡಳಿತಾತ್ಮಕ ಕಾರಣಗಳಿಗಾಗಿ ಇತರೆಡೆಗೆ ಸ್ಥಳಾಂತರಿಸಲಾಗಿದ್ದು, 02 ಎಕರೆ ಭೂಮಿ ಮತ್ತು 04 ಕೊಠಡಿಗಳನ್ನೊಳಗೊಂಡ ಕಟ್ಟಡ ಲಭ್ಯವಿರುತ್ತದೆ. ರಾಷ್ಟ್ರೀಯ ನೂತನ ಶಿಕ್ಷಣ ನೀತಿ-2020ರ ಸಮಗ್ರತಾ ದೃಷ್ಟಿಯ ಬಹುಶಿಸ್ತೀಯ ಉದ್ಯೋಗಾಬಿಮುಖ ಶಿಕ್ಷಣವನ್ನು ಬಹು ಆಗಮನ-ನಿರ್ಗಮನ ಆಯ್ಕೆಯ ಸಹಿತ ಅನುಷ್ಠಾನಗೊಳಿಸಲು ಒತ್ತು ನೀಡಿದ್ದು, ಈ ಶಿಕ್ಷಣ ವಿಧಾನದಿಂದ ವಿದ್ಯಾರ್ಥಿಗಳು ಅತ್ಯಾಧುನೀಕರಣಗೊಂಡ ಶಿಕ್ಷಣವನ್ನು ಪಡೆಯಲು ಅನುಕೂಲವಾಗುತ್ತದೆ. ಆದುದರಿಂದ, ಈ ಕಾಲೇಜನ್ನು ವಿಶ್ವವಿದ್ಯಾನಿಲಯದ ಘಟಕ ಕಾಲೇಜಾಗಿ ಪ್ರಾರಂಭಿಸುವ ಸಂಬಂಧ ಒಂದು ಸಮಿತಿ ರಚಿಸಿ, 2021-22ನೇ ಶೈಕ್ಷಣಿಕ ಸಾಲಿನಿಂದ (ಜೂನ್-ಜುಲೈ ಮಾಹೆಯಿಂದ) ಪ್ರಾರಂಭಿಸಲು ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದನೆ ನೀಡಬೇಕೆಂದು ತಿಳಿಸಿದರು. |
| **ತೀರ್ಮಾನ** | ಹಾಸನ ಜಿಲ್ಲೆ ಹೊಳೆನರಸೀಪುರದ ತಾಲ್ಲೂಕಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹಳ್ಳಿ ಮೈಸೂರು ಕಾಲೇಜನ್ನು 2021-22ನೇ ಶೈಕ್ಷಣಿಕ ಸಾಲಿನಿಂದ ಮೈಸೂರು ವಿಶ್ವವಿದ್ಯಾನಿಲಯದ ಘಟಕ ಕಾಲೇಜಾಗಿ ಪ್ರಾರಂಭಿಸಲು ಸಭೆಯು ಅನುಮೋದಿಸಿತು. |
| II.4 | ಅನುಕಂಪದ ಆಧಾರದ ಮೇಲೆ ನೇಮಕ ಮಾಡುವ ಸಂಬಂಧ ಅಧಿನಿಯಮವನ್ನು ಪರಿಷ್ಕರಿಸುವ ಬಗ್ಗೆ. |
| | ಮಾನ್ಯ ಕುಲಪತಿಯವರು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯದ ಖಾಯಂ ಉದ್ಯೋಗಿಯು ಸೇವೆಯಲ್ಲಿರುವಾಗಲೇ ಮೃತಪಟ್ಟಲ್ಲಿ ಅವರ ಅವಲಂಭಿತರಿಗೆ ಅನುಕಂಪದ ಆಧಾರದ ಮೇಲೆ ನೇಮಕ ಮಾಡಲಾಗುತ್ತಿದೆ. ಸರ್ಕಾರದ ಉಪ ಕಾರ್ಯದರ್ಶಿಗಳು, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವಾ ನಿಯಮಗಳು), ಬೆಂಗಳೂರು ಇವರ ದಿನಾಂಕ: 06-07-2020ರ ಸುತ್ತೋಲೆಯಲ್ಲಿ ಪ್ರಸ್ತುತವಿರುವ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರಚಿಸುವ/ಪುನರಾವಲೋಕಿಸುವಂತೆ ತಿಳಿಸಿರುತ್ತಾರೆ. ಈ ಸಂಬಂಧ ಮೈಸೂರು ವಿಶ್ವವಿದ್ಯಾನಿಲಯವು ಕರಡು ಅಧಿನಿಯಮ ರಚನಾ ಸಮಿತಿಯನ್ನು ರಚಿಸಲಾಯಿತು. ರಚನಾ ಸಮಿತಿಯ ಶಿಫಾರಸ್ಸಿನನ್ವಯ ಹಾಗೂ ರಾಜ್ಯ ಸರ್ಕಾರದ ಆದೇಶಗಳನ್ನು ಅಳವಡಿಸಿಕೊಂಡು ವಿಶ್ವವಿದ್ಯಾನಿಲಯದ ಕಾಯ್ದೆ 2000 ಪ್ರಕರಣ 41(1)ರನ್ವಯ ಅನುಕಂಪದ ಆಧಾರದ ಮೇಲೆ |

| | |
|---|---|
| | ನೇಮಕ ಮಾಡುವ ಅಧಿನಿಯಮವನ್ನು ಪರಿಷ್ಕರಿಸಲಾಗಿದೆ. ಈ ಪರಿಷ್ಕೃತ ಅಧಿನಿಯಮಕ್ಕೆ ಈಗಾಗಲೇ ಸಿಂಡಿಕೇಟ್ ಸಭೆಯಲ್ಲಿ ಅನುಮೋದನೆ ಪಡೆಯಲಾಗಿದ್ದು, ಶಿಕ್ಷಣ ಮಂಡಳ ಸಭೆಯು ಅನುಮೋದಿಸಿದರೆ ಸರ್ಕಾರಕ್ಕೆ ಕಳುಹಿಸಲಾಗುವುದೆಂದು ತಿಳಿಸಿದರು.<br><br>ಅನುಕಂಪದ ಆಧಾರದ ಮೇಲೆ ನೇಮಕ ಮಾಡುವ ಅಧಿನಿಯಮದ ಕ್ರಮ ಸಂಖ್ಯೆ 5ರ ಉಪ ಕ್ರಮ ಸಂಖ್ಯೆ. (J) (2) (b)ರಲ್ಲಿ ಹಿಂದುಳಿದ ವರ್ಗಗಳನ್ನು (For Cat.IIA, IIB, IIIA and IIIB) ನಿರ್ಧಿಷ್ಟವಾಗಿ ನಮೂದಿಸಿರುವಂತೆ, (J) (3) (b)ರಲ್ಲಿರುವ "For Widow under Backward Community" ಎಂಬುದರ ಬದಲಾಗಿ "For Widow under Cat.IIA, IIB, IIIA and IIIB' ಎಂದು ಸ್ಪಷ್ಟವಾಗಿ ತಿದ್ದುಪಡಿ ಮಾಡಿ ಸರ್ಕಾರಕ್ಕೆ ಕಳುಹಿಸುವುದು ಸೂಕ್ತವೆಂದು ವಿಶ್ವವಿದ್ಯಾನಿಲಯದ ಎಲ್ಲಾ ನಿಕಾಯದ ಡೀನರುಗಳು ತಿಳಿಸಿದರು. ಇದಕ್ಕೆ ಮಾನ್ಯ ಕುಲಪತಿಯವರು ಹಾಗೂ ಶಿಕ್ಷಣ ಮಂಡಳ ಸದಸ್ಯರುಗಳು ಒಪ್ಪಿಗೆ ಸೂಚಿಸಿದರು. |
| **ತೀರ್ಮಾನ** | ಕರಡು ಅಧಿನಿಯಮ ರಚನಾ ಸಮಿತಿ ಸಭೆಯ ಶಿಫಾರಸ್ಸಿನನ್ವಯ ಹಾಗೂ ವಿಶ್ವವಿದ್ಯಾನಿಲಯದ ಕಾಯ್ದೆ 2000 ಪ್ರಕರಣ 41(1)ರನ್ವಯ ಪರಿಷ್ಕರಿಸಲಾಗಿರುವ ಅನುಕಂಪದ ಆಧಾರದ ಮೇಲೆ ನೇಮಕ ಮಾಡುವ ಸಂಬಂಧ ಕರಡು ಅಧಿನಿಯಮವನ್ನು ಮೇಲಿನಂತೆ ತಿದ್ದುಪಡಿ ಮಾಡಿ ಸರ್ಕಾರಕ್ಕೆ ಅನುಮೋದನೆಗಾಗಿ ಕಳುಹಿಸುವ ಸಂಬಂಧ ಸಭೆಯು ಶಿಫಾರಸ್ಸು ಮಾಡಲು ತೀರ್ಮಾನಿಸಲಾಯಿತು. |
| II.5 | 2019-20ನೇ ಶೈಕ್ಷಣಿಕ ಸಾಲಿಗೆ ಶ್ರೀ ಪುರುಷೋತ್ತಮ.ಕೆ ಎಂಬ ವಿದ್ಯಾರ್ಥಿಗೆ ಬಿ.ಎಡ್ ಕೋರ್ಸಿನ 4ನೇ ಸೆಮಿಸ್ಟರ್ ಮರು ಪ್ರವೇಶಾತಿ ಮಾಡಿಕೊಳ್ಳಲು ಅನುಮತಿ ನೀಡಿರುವ ಬಗ್ಗೆ ಅನುಸಮರ್ಥನೆಗಾಗಿ. |
| | ಶ್ರೀ ಪುರುಷೋತ್ತಮ ಕೆ ಎಂಬ ವಿದ್ಯಾರ್ಥಿಯು 2015-16ನೇ ಶೈಕ್ಷಣಿಕ ಸಾಲಿನಲ್ಲಿ ಮೈಸೂರಿನ ವಾತ್ಸಲ್ಯ ಶಿಕ್ಷಣ ಮಹಾವಿದ್ಯಾಲಯ ಕಾಲೇಜಿಗೆ ಬಿ.ಎಡ್ ಕೋರ್ಸ್‌ಗೆ ಸರ್ಕಾರಿ ಖೋಟಾದಡಿ ಪ್ರವೇಶಾತಿ ಪಡೆದು ಮೂರು ಸೆಮಿಸ್ಟರ್‌ಗಳನ್ನು ಪೂರ್ಣಗೊಳಿಸಿ ತೇರ್ಗಡೆ ಹೊಂದಿದ್ದಾರೆ, 4ನೇ ಸೆಮಿಸ್ಟರ್‌ಗೆ 2018-19ನೇ ಶೈಕ್ಷಣಿಕ ಸಾಲಿನಲ್ಲಿ ಅನಾರೋಗ್ಯನಿಮಿತ್ತ ಪ್ರವೇಶಾತಿ ಪಡೆದು ಪರೀಕ್ಷೆ ತೆಗೆದುಕೊಳ್ಳಲು ಸಾಧ್ಯವಾಗಿರುವುದಿಲ್ಲ ಮತ್ತು ಈ ವಿದ್ಯಾರ್ಥಿಯು ವಿಶ್ವವಿದ್ಯಾನಿಲಯದ ನಿಯಮಾನುಸಾರ 2018-19ನೇ ಶೈಕ್ಷಣಿಕ ಸಾಲಿಗೆ Double the duration ಅವಧಿಯು ಮುಗಿದಿರುತ್ತದೆ. ಶಿಕ್ಷಣ ನಿಕಾಯದ ಡೀನರ ಅಭಿಪ್ರಾಯದ ಮೇರೆಗೆ ಹಾಗೂ ಪ್ರಸ್ತುತ ಕೋವಿಡ್-19 ಎಲ್ಲೆಡೆ ವ್ಯಾಪಕವಾಗಿ ಹರಡಿದ್ದು, ಸದರಿ ವಿದ್ಯಾರ್ಥಿಯ ಅನಾರೋಗ್ಯವನ್ನು ಪರಿಗಣಿಸಿ, ಮಾನವೀಯತೆಯ ಆಧಾರದ ಮೇಲೆ 2019-20ನೇ ಶೈಕ್ಷಣಿಕ ಸಾಲಿನ 4ನೇ ಸೆಮಿಸ್ಟರ್‌ಗೆ ವಿಶ್ವವಿದ್ಯಾನಿಲಯದ ನಿಯಮಾನುಸಾರ ಶುಲ್ಕವನ್ನು ಪಡೆದು ಶಿಕ್ಷಣ ಮಂಡಳ ನಿರ್ಣಯವನ್ನು ಕಾಯ್ದಿರಿಸಿ ವಿಶೇಷ ಸಂದರ್ಭವೆಂದು ಪರಿಗಣಿಸಿ ಮರು ಪ್ರವೇಶಾತಿ ಮಾಡಿಕೊಳ್ಳಲು ಅನುಮತಿ ನೀಡಲಾಗಿದೆಯೆಂದು ಮಾನ್ಯ ಕುಲಪತಿಯವರು ತಿಳಿಸಿದರು.<br><br>ಪ್ರೊ.ವೆಂಕಟೇಶ್‌ಕುಮಾರ್‌ರವರು ಮಾತನಾಡಿ, ಸದರಿ ವಿದ್ಯಾರ್ಥಿಗೆ Double the duration ಅವಧಿಯು ಮುಗಿದಿರುವುದರಿಂದ ವಿಶೇಷ ಪ್ರಕರಣ ಎಂದು ಮರು ಪ್ರವೇಶಾತಿ ಮಾಡಿಕೊಳ್ಳಲು ಅನುಮತಿ ನೀಡಬೇಕೆಂದು ತಿಳಿಸಿದರು, ಇದಕ್ಕೆ ಪ್ರೊ.ನಿಂಗಮ್ಮ ಬೆಟ್ಸೂರ್ ರವರು ಧನಿಗೂಡಿಸಿ ವಿಶ್ವವಿದ್ಯಾನಿಲಯವು ಇಂತಹ ಎಲ್ಲಾ ಪ್ರಕರಣಗಳನ್ನು ಸಾಮಾನ್ಯೀಕರಿಸಲು (Generalize) ಇದೊಂದು ವಿಶೇಷ ಪ್ರಕರಣವೆಂದು ಪರಿಗಣಿಸಲು ಸಾಧ್ಯವಿಲ್ಲದಿರುವುದರಿಂದ, ಬಿ.ಎಡ್ ರೆಗ್ಯುಲೇಷನ್‌ನಲ್ಲಿರುವ ಅವಕಾಶದಂತೆ ಡೀನರು ಶಿಫಾರಸ್ಸು ಮಾಡಿದ್ದು, ವಿದ್ಯಾರ್ಥಿಯ ಶೈಕ್ಷಣಿಕ ಹಿತದೃಷ್ಟಿಯಿಂದ ಮಾನ್ಯ ಕುಲಪತಿಗಳು ಅನುಮತಿ ನೀಡಿರುವುದಾಗಿ ಸಭೆಗೆ ಮಾಹಿತಿ ನೀಡಿದರು. |
| **ತೀರ್ಮಾನ** | 2019-20ನೇ ಶೈಕ್ಷಣಿಕ ಸಾಲಿಗೆ ಶ್ರೀ ಪುರುಷೋತ್ತಮ.ಕೆ ಎಂಬ ವಿದ್ಯಾರ್ಥಿಗೆ ಬಿ.ಎಡ್ ಕೋರ್ಸಿನ 4ನೇ ಸೆಮಿಸ್ಟರ್‌ಗೆ ವಿಶೇಷ ಪ್ರಕರಣವೆಂದು ಪರಿಗಣಿಸಿ ಮರು ಪ್ರವೇಶಾತಿ ಮಾಡಿಕೊಳ್ಳಲು ಅನುಮತಿ ನೀಡಿರುವುದನ್ನು ಸಭೆಯು ಅನುಸಮರ್ಥಿಸಿತು. |

| | |
|---|---|
| II.6 | ಮೈಸೂರು ವಿಶ್ವವಿದ್ಯಾನಿಲಯದಲ್ಲಿ ದೃಷ್ಟಿದೋಷವುಳ್ಳ ವಿದ್ಯಾರ್ಥಿಗಳ ಉನ್ನತ ಶಿಕ್ಷಣಕ್ಕಾಗಿ "ದೃಷ್ಟಿ ವಿಶ್ವಾಸಿಗರ ಸಮನ್ವಯ ಸಬಲೀಕರಣ ಕೇಂದ್ರ"ವನ್ನು ಸ್ಥಾಪಿಸುವ ಸಂಬಂಧ ಸಿದ್ಧಪಡಿಸಿರುವ ಕರಡು ಅಧಿನಿಯಮವನ್ನು ಅನುಮೋದಿಸುವ ಬಗ್ಗೆ. |
| | ಮಾನ್ಯ ಕುಲಪತಿಯವರು ಮಾತನಾಡಿ, ಯುಪಿಇ ಯೋಜನೆಯಡಿಯಲ್ಲಿ ದೃಷ್ಟಿದೋಷ ಇರುವವರಿಗೆ ಕೆಲವು ಪ್ರಾಜೆಕ್ಟ್‌ಗಳನ್ನು ಸೃಜಿಸಲಾಗಿದೆ. ಸರ್ಕಾರವು ದೃಷ್ಟಿದೋಷವುಳ್ಳ ವಿದ್ಯಾರ್ಥಿಗಳು ಉನ್ನತ ಶಿಕ್ಷಣವನ್ನು ಮುಂದುವರೆಸಲು ಅನುವು ಮಾಡಿಕೊಡುವ ಸಂಬಂಧ ದಿನಾಂಕ:03-06-2019ರ ಪತ್ರದಲ್ಲಿ ಎಲ್ಲಾ ವಿಶ್ವವಿದ್ಯಾನಿಲಯದಲ್ಲಿ "ಬ್ರೈಲ್ ಕೇಂದ್ರ"ವನ್ನು ಸ್ಥಾಪಿಸಿ ಮಾಹಿತಿಯನ್ನು ಸರ್ಕಾರಕ್ಕೆ ಸಲ್ಲಿಸುವಂತೆ ತಿಳಿಸಿರುವ ಹಿನ್ನೆಲೆಯಲ್ಲಿ, ಈ ಸಂಬಂಧ ರಚನಾ ಸಮಿತಿಯನ್ನು ರಚಿಸಲಾಯಿತು. ರಚನಾ ಸಮಿತಿಯ ಶಿಫಾರಸ್ಸಿನನ್ವಯ ಮೈಸೂರು ವಿಶ್ವವಿದ್ಯಾನಿಲಯದ ರಾಜ್ಯಶಾಸ್ತ್ರ ಅಧ್ಯಯನ ವಿಭಾಗದಲ್ಲಿ "ದೃಷ್ಟಿ ವಿಶ್ವಾಸಿಗರ ಸಮನ್ವಯ ಸಬಲೀಕರಣ ಕೇಂದ್ರ"ವನ್ನು ಸ್ಥಾಪಿಸುವ ಸಂಬಂಧ ಸಿದ್ಧಪಡಿಸಿರುವ ಕರಡು ಅಧಿನಿಯಮವನ್ನು ಸರ್ಕಾರಕ್ಕೆ ಕಳುಹಿಸಲು ಶಿಕ್ಷಣ ಮಂಡಳ ಸಭೆಯು ಅನುಮೋದಿಸಬೇಕೆಂದು ತಿಳಿಸಿದರು.<br>ಪ್ರೊ.ಮುಜಾಫರ್ ಅಸ್ಸಾದಿಯವರು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯದ ರಾಜ್ಯಶಾಸ್ತ್ರ ಅಧ್ಯಯನ ವಿಭಾಗದಲ್ಲಿ "ದೃಷ್ಟಿ ವಿಶ್ವಾಸಿಗರ ಸಮನ್ವಯ ಸಬಲೀಕರಣ ಕೇಂದ್ರ"ವನ್ನು ಸ್ಥಾಪಿಸುತ್ತಿರುವುದು ಸರಿಯಷ್ಟೆ. ಸದರಿ ಕೇಂದ್ರಕ್ಕೆ ದೃಷ್ಟಿದೋಷವುಳ್ಳವರನ್ನೇ ಪರಿಗಣಿಸಿ ಹುದ್ದೆಗಳನ್ನು ಹಾಗೂ ಅವಕಾಶಗಳನ್ನು ನೀಡಬೇಕೆಂದು ತಿಳಿಸಿದರು.<br>ಪ್ರೊ.ಜಿ.ವೆಂಕಟೇಶ್‌ಕುಮಾರ್‌ರವರು ಮಾತನಾಡಿ, ವಿಶ್ವವಿದ್ಯಾನಿಲಯಗಳಲ್ಲಿ ಸರ್ಕಾರವು ವಿಶೇಷವಾಗಿ ದೃಷ್ಟಿದೋಷವುಳ್ಳವರಿಗೆ ಈ ಕೇಂದ್ರವನ್ನು ಸ್ಥಾಪಿಸಲು ಅನುವು ಮಾಡಿಕೊಟ್ಟಿರುವುದರಿಂದ, ಹೆಚ್ಚಿನ ಮಟ್ಟದಲ್ಲಿ ದೃಷ್ಟಿದೋಷವುಳ್ಳವರನ್ನು ಪರಿಗಣಿಸಬೇಕೆಂದು ಸೂಚಿಸಿದರು.<br>ಈ ಸಂಬಂಧ ಮಾನ್ಯ ಕುಲಪತಿಯವರು ಮಾತನಾಡಿ, ಈ ಅಧಿನಿಯಮವನ್ನು ಸರ್ಕಾರದ ಆದೇಶದಂತೆ ಸಿದ್ಧಪಡಿಸಲಾಗಿದ್ದು, ದೃಷ್ಟಿದೋಷವುಳ್ಳವರಿಗೆ ಸ್ವಲ್ಪ ಹೆಚ್ಚಿನ ಅವಕಾಶ ಮಾಡಿಕೊಟ್ಟು, ಸಬಲೀಕರಣ ಸಮಿತಿಯ ಶಿಫಾರಸ್ಸಿನ ಪ್ರಕಾರ ನೇಮಿಸಲು ಪರಿಗಣಿಸಿ, ಅಧಿನಿಯಮದಲ್ಲಿ part 30-40% research for Physicall challenged ಎಂದು ನಮೂದಿಸಲಾಗುವುದು. ಅಧಿನಿಯಮದಲ್ಲಿ ಯಾವುದಾದರೂ ಮಾರ್ಪಾಡು ಇದ್ದರೆ ತಿದ್ದುಪಡಿ ಮಾಡಿ ಸರ್ಕಾರಕ್ಕೆ ಕಳುಹಿಸಲು ಸಭೆಯು ಅನುಮೋದಿಸಬೇಕೆಂದು ತಿಳಿಸಿದರು. |
| **ತೀರ್ಮಾನ** | ಮೈಸೂರು ವಿಶ್ವವಿದ್ಯಾನಿಲಯದಲ್ಲಿ ದೃಷ್ಟಿದೋಷವುಳ್ಳ ವಿದ್ಯಾರ್ಥಿಗಳ ಉನ್ನತ ಶಿಕ್ಷಣಕ್ಕಾಗಿ "ದೃಷ್ಟಿ ವಿಶ್ವಾಸಿಗರ ಸಮನ್ವಯ ಸಬಲೀಕರಣ ಕೇಂದ್ರ"ವನ್ನು ಸ್ಥಾಪಿಸುವ ಸಂಬಂಧ ಸಿದ್ಧಪಡಿಸಿರುವ ಕರಡು ಅಧಿನಿಯಮವನ್ನು ಅಗತ್ಯ ಮಾರ್ಪಾಡುಗಳನ್ನು ಮಾಡಿ ಸರ್ಕಾರಕ್ಕೆ ಕಳುಹಿಸಲು ಸಭೆಯು ತೀರ್ಮಾನಿಸಿತು. |
| II.7 | ಶ್ರೀ ಮಂಟೇಸ್ವಾಮಿ, ಸಿದ್ದಪ್ಪಾಜಿ, ರಾಚಪ್ಪಾಜಿ ಇವರುಗಳ ಹೆಸರಿನಲ್ಲಿ ಅಧ್ಯಯನ ಪೀಠ ಸ್ಥಾಪನೆಗೆ ಹಾಗೂ ಅವರ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ರಚಿತವಾಗಿರುವ ಕರಡು ಅಧಿನಿಯಮದ ಅನುಮೋದನೆ ಬಗ್ಗೆ. |
| **ತೀರ್ಮಾನ** | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯದ ಕಾಯ್ದೆ 2000 ಪ್ರಕರಣ 40 ವ್ಯಾಪ್ತಿಯಲ್ಲಿ ಶ್ರೀ ಮಂಟೇಸ್ವಾಮಿ, ಸಿದ್ದಪ್ಪಾಜಿ, ರಾಚಪ್ಪಾಜಿ ಇವರುಗಳ ಹೆಸರಿನಲ್ಲಿ ಅಧ್ಯಯನ ಪೀಠ ಸ್ಥಾಪನೆಗೆ ಹಾಗೂ ಅವರ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ರಚಿತವಾಗಿರುವ ಕರಡು ಅಧಿನಿಯಮವನ್ನು ಸಭೆಯು ಅನುಮೋದಿಸಿತು. |
| II.8 | ಉನ್ನತ ಭಾರತ ಯೋಜನೆ ಮತ್ತು ಸ್ಮಾರ್ಟ್ ವಿಲೇಜ್ ಯೋಜನೆಯಲ್ಲಿ ದತ್ತು ಪಡೆದ ಗ್ರಾಮಗಳ ವ್ಯಾಪ್ತಿಯಲ್ಲಿ ಬರುವ ಇಬ್ಬರು ವಿದ್ಯಾರ್ಥಿಗಳಿಗೆ ಉನ್ನತ ವ್ಯಾಸಂಗಕ್ಕೆ ಅವಕಾಶ ಕಲ್ಪಿಸಲು ಕೋರಿ. |
| **ತೀರ್ಮಾನ** | 2020-21ನೇ ಶೈಕ್ಷಣಿಕ ಸಾಲಿನಿಂದ ಸ್ನಾತಕೋತ್ತರ ಪದವಿ ಪ್ರವೇಶಾತಿಯಲ್ಲಿ ಉನ್ನತ ಭಾರತ ಯೋಜನೆ ಮತ್ತು ಸ್ಮಾರ್ಟ್ ವಿಲೇಜ್ ಯೋಜನೆಯಲ್ಲಿ ಮೈಸೂರು ವಿಶ್ವವಿದ್ಯಾನಿಲಯವು ದತ್ತು ಪಡೆದಿರುವ 06 (ಆರು) ಗ್ರಾಮಗಳ ವ್ಯಾಪ್ತಿಯಲ್ಲಿ ಬರುವ ಒಬ್ಬ ವಿದ್ಯಾರ್ಥಿ ಮತ್ತು ಒಬ್ಬ |

| | |
|---|---|
| | ವಿದ್ಯಾರ್ಥಿನಿಗೆ ಹೆಚ್ಚುವರಿಯಾಗಿ (supernumerary) ಮೆರಿಟ್ ಆಧಾರದ ಮೇಲೆ ಸ್ಕೀಂ 'ಎ' ಅಡಿಯಲ್ಲಿ ಉನ್ನತ ವ್ಯಾಸಂಗಕ್ಕೆ ಅವಕಾಶ ಕಲ್ಪಿಸಲು ಸಭೆಯು ಅನುಮೋದಿಸಿತು. |
| II.9 | ಅಧ್ಯಾಪಕೇತರ ವೃಂದ ಮತ್ತು ನೇಮಕಾತಿ ನಿಯಮಗಳ ಅಧಿನಿಯಮವನ್ನು ಪರಿಷ್ಕರಿಸುವ ಬಗ್ಗೆ. |
| | ಮಾನ್ಯ ಕುಲಪತಿಯವರು ಮಾತನಾಡಿ, ಸರ್ಕಾರದ ಉಪ ಕಾರ್ಯದರ್ಶಿಗಳು, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವಾ ನಿಯಮಗಳು), ಬೆಂಗಳೂರು ಇವರ ದಿನಾಂಕ: 06-07-2020ರ ಸುತ್ತೋಲೆಯಲ್ಲಿ ಪ್ರಸ್ತುತವಿರುವ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರಚಿಸುವ/ಪುನರಾವಲೋಕಿಸುವಂತೆ ತಿಳಿಸಿರುತ್ತಾರೆ. ಪ್ರಸ್ತುತ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಚಾಲ್ತಿಯಲ್ಲಿರುವ 1983 ಅಧ್ಯಾಪಕೇತರರ ವೃಂದ ಮತ್ತು ನೇಮಕಾತಿ ಅಧಿನಿಯಮವನ್ನು ಪರಿಷ್ಕರಿಸುವ ಸಂಬಂಧ ವಿಶ್ವವಿದ್ಯಾನಿಲಯದ ಕರಡು ಅಧಿನಿಯಮ ರಚನಾ ಸಮಿತಿ ಸಭೆಯ ಗಮನಕ್ಕೆ ತರಲಾಗಿ, ಸರ್ಕಾರವು ಸೂಚಿಸಿರುವ ನಿಯಮಗಳನ್ನು ಅಳವಡಿಸಿಕೊಂಡು ಸಮಿತಿ ಸಭೆಯ ಶಿಫಾರಸ್ಸಿನನ್ವಯ ಹಾಗೂ ವಿಶ್ವವಿದ್ಯಾನಿಲಯದ ಕಾಯ್ದೆ 2000 ಪ್ರಕರಣ41(1)ರನ್ವಯ ಅಧ್ಯಾಪಕೇತರ ವೃಂದ ಮತ್ತು ನೇಮಕಾತಿ ನಿಯಮಗಳ ಅಧಿನಿಯಮವನ್ನು ಪರಿಷ್ಕರಿಸಿದ್ದು, ಮೈಸೂರು ವಿಶ್ವವಿದ್ಯಾನಿಲಯಕ್ಕೆ 08 ಉಪಕುಲಸಚಿವ ಹುದ್ದೆಗಳು ಮಂಜೂರಾಗಿದ್ದು, ಪ್ರಸ್ತುತ 06 ಹುದ್ದೆಗಳನ್ನು ಅಧ್ಯಾಪಕೇತರರುಗಳಿಗೆ ಹಾಗೂ 02 ಹುದ್ದೆಗಳನ್ನು ಅಧ್ಯಾಪಕರುಗಳಿಗೆ ಮೀಸಲಿರಿಸಲಾಗಿದೆ. ಅಧ್ಯಾಪಕರು ಉಪಕುಲಸಚಿವರ ಹುದ್ದೆಗೆ ನಿಯೋಜನೆಗೊಂಡಲ್ಲಿ, ಯುಜಿಸಿ ವೇತನದ ಬದಲು state scale ವೇತನ ನೀಡಬೇಕೆಂದು ಆಡಿಟ್ ಆಕ್ಷೇಪಣೆಯಾಗುತ್ತಿರುವ ಹಿನ್ನೆಲೆಯಲ್ಲಿ ಈ ಅಧಿನಿಯಮದಲ್ಲಿ 08 ಹುದ್ದೆಗಳನ್ನು ಅಧ್ಯಾಪಕೇತರರುಗಳಿಗೆ ಮೀಸಲಿರಿಸಲು ಪರಿಷ್ಕರಿಸಲಾಗಿದೆ. ಇನ್ನು ಮುಂದೆ ಅಧ್ಯಾಪಕರುಗಳನ್ನು ವಿಶ್ವವಿದ್ಯಾನಿಲಯಕ್ಕೆ/ಸರ್ಕಾರಕ್ಕೆ ಯಾವುದೇ ಆರ್ಥಿಕ ಹೊಣೆಗಾರಿಕೆಯಿಲ್ಲದಂತೆ ಅಗತ್ಯವಿರುವೆಡೆ ವಿಶೇಷ ಅಧಿಕಾರಿಗಳನ್ನಾಗಿ ನೇಮಕ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದೆಂದು ತಿಳಿಸುತ್ತಾ, ಶಿಕ್ಷಣ ಮಂಡಳ ಸಭೆಯು ಪರಿಷ್ಕರಿಸಲಾಗಿರುವ ಅಧ್ಯಾಪಕೇತರ ವೃಂದ ಮತ್ತು ನೇಮಕಾತಿ ನಿಯಮಗಳ ಕರಡು ಅಧಿನಿಯಮವನ್ನು ಅನುಮೋದಿಸಿದರೆ, ಸಿಂಡಿಕೇಟ್ ಸಭೆಯಲ್ಲಿ ಮಂಡಿಸಿ ಅನುಮೋದನೆಯನ್ನು ಪಡೆದು ಸರ್ಕಾರಕ್ಕೆ ಕಳುಹಿಸಲು ಕ್ರಮ ತೆಗೆದುಕೊಳ್ಳಲಾಗುವುದೆಂದು ತಿಳಿಸಿದರು.<br>ಪ್ರೊ.ಜಿ.ವೆಂಕಟೇಶ್‌ಕುಮಾರ್‌ರವರು ಮಾತನಾಡಿ, ಒಟ್ಟು 08 ಹುದ್ದೆಗಳಲ್ಲಿ ಒಂದು ಹುದ್ದೆಯನ್ನು ಮಹಿಳಾ ಉದ್ಯೋಗಿಗೆ ಮೀಸಲಿಡುವಂತೆ ಮನವಿ ಮಾಡಿದರು, ಇದಕ್ಕೆ ಮಾನ್ಯ ಕುಲಪತಿಯವರು ನಿಯಮಾನುಸಾರ ಕ್ರಮವಹಿಸಲಾಗುವುದೆಂದು ತಿಳಿಸಿದರು. |
| **ತೀರ್ಮಾನ** | ಕರಡು ಅಧಿನಿಯಮ ರಚನಾ ಸಮಿತಿ ಸಭೆಯ ಶಿಫಾರಸ್ಸಿನನ್ವಯ ಹಾಗೂ ವಿಶ್ವವಿದ್ಯಾನಿಲಯದ ಕಾಯ್ದೆ 2000 ಪ್ರಕರಣ 41(1)ರನ್ವಯ ಪರಿಷ್ಕರಿಸಲಾಗಿರುವ ಅಧ್ಯಾಪಕೇತರ ವೃಂದ ಮತ್ತು ನೇಮಕಾತಿ ನಿಯಮಗಳ ಕರಡು ಅಧಿನಿಯಮವನ್ನು ಶಿಫಾರಸ್ಸು ಮಾಡಿ ಕುಲಾಧಿಪತಿಗಳ ಅನುಮೋದನೆಗಾಗಿ ಸರ್ಕಾರಕ್ಕೆ ಕಳುಹಿಸಲು ಶಿಕ್ಷಣ ಮಂಡಳ ಸಭೆಯು ತೀರ್ಮಾನಿಸಿತು. |
| II.10 | ವಿಶ್ವವಿದ್ಯಾನಿಲಯದ 2019-20ನೇ ಸಾಲಿನ ವಾರ್ಷಿಕ ವರದಿಯ ಅನುಮೋದನೆ ಬಗೆಗೆ. |
| **ತೀರ್ಮಾನ** | ಮೈಸೂರು ವಿಶ್ವವಿದ್ಯಾನಿಲಯದ 2019-20ನೇ ಸಾಲಿನ ವಾರ್ಷಿಕ ವರದಿಯನ್ನು ಶಿಕ್ಷಣ ಮಂಡಳ ಸಭೆಯು ಅನುಮೋದಿಸಿತು. |
| II.11 | ಪಿಹೆಚ್.ಡಿ ನಿಯಮಾವಳಿ 2017ಕ್ಕೆ ಮಾರ್ಪಾಡು ಮಾಡಿರುವ ವಿನಿಯಮಾವಳಿಯನ್ನು ಅನುಮೋದಿಸುವ ಕುರಿತು. |
| | ಮಾನ್ಯ ಕುಲಪತಿಯವರು ಮಾತನಾಡಿ, ಯುಜಿಸಿ ನಿಯಮಗಳನ್ನು ಅಳವಡಿಸಿಕೊಂಡು ಹಾಗೂ ಸರ್ಕಾರದ ಆದೇಶದಂತೆ ಮಾರ್ಪಾಡು ಮಾಡಲಾಗಿರುವ ಪಿಹೆಚ್.ಡಿ ನಿಯಮಾವಳಿ 2017ಕ್ಕೆ |

| | |
|---|---|
| | ಘನತೆವೆತ್ತ ಕುಲಾಧಿಪತಿಗಳ ಅಂಕಿತಕ್ಕಾಗಿ ಸರ್ಕಾರಕ್ಕೆ ಕಳುಹಿಸಲು ಶಿಕ್ಷಣ ಮಂಡಳ ಸಭೆಯು ಅನುಮೋದಿಸಬೇಕೆಂದು ತಿಳಿಸಿದರು. |
| **ತೀರ್ಮಾನ** | ಪಿಹೆಚ್.ಡಿ ನಿಯಮಾವಳಿ 2017ಕ್ಕೆ ಮಾರ್ಪಾಡು ಮಾಡಿರುವ ವಿನಿಯಮಾವಳಿಯನ್ನು ಘನತೆವೆತ್ತ ಕುಲಾಧಿಪತಿಗಳ ಅಂಕಿತಕ್ಕಾಗಿ ಸರ್ಕಾರಕ್ಕೆ ಕಳುಹಿಸಲು ಸಭೆಯು ತೀರ್ಮಾನಿಸಿತು. |
| II.12 | ಸರ್ಕಾರದಿಂದ ೨೦೧೯ರಲ್ಲಿ ಅನುಮೋದನೆಗೊಂಡಿರುವ ಅಧಿನಿಯಮದಲ್ಲಿ ಕೆಲವು ಪರಿಷ್ಕರಣೆಗಳನ್ನು ಮಾಡುವ ಬಗ್ಗೆ. |
| | ಮಾನ್ಯ ಕುಲಪತಿಯವರು ಮಾತನಾಡಿ ೨೦೧೯ರಲ್ಲಿ ಅನುಮೋದನೆಗೊಂಡಿರುವ ಪರಿಷ್ಕೃತ ತಿದ್ದುಪಡಿ ಅಧಿನಿಯಮವನ್ನು ಈಗಾಗಲೇ ಸಿಂಡಿಕೇಟ್ ಸಭೆಯು ಅನುಮೋದಿಸಿದೆ ಎಂದು ಸಭೆಯ ಗಮನಕ್ಕೆ ತಂದು ಸದರಿ ಅಧಿನಿಯಮವನ್ನು ಶಿಕ್ಷಣ ಮಂಡಳ ಸಭೆಯು ಅನುಮೋದಿಸಬೇಕೆಂದು ತಿಳಿಸಿದರು. |
| **ತೀರ್ಮಾನ** | ಪರಿಷ್ಕೃತ ತಿದ್ದುಪಡಿ ಅಧಿನಿಯಮವನ್ನು ಶಿಕ್ಷಣ ಮಂಡಳ ಸಭೆಯು ಅನುಮೋದಿಸಿತು. |
| III.I | Specialized ಕೋರ್ಸುಗಳ ಅಧ್ಯಯನ ಮಂಡಳಿಗಳ ಶಿಫಾರಸ್ಸು ನಿರ್ಣಯಗಳನ್ನು ವಿದ್ಯಾವಿಷಯಕ ಪರಿಷತ್ ಸಭೆಯ ಅನುಮೋದನೆಯನ್ನು ಕೋರುವ ಬಗ್ಗೆ.<br>(ವಾಣಿಜ್ಯ ನಿಕಾಯ) |
| **ತೀರ್ಮಾನ** | 2020-21ನೇ ಶೈಕ್ಷಣಿಕ ಸಾಲಿನಿಂದ ಮೈಸೂರಿನ ಶಾರದ ವಿಲಾಸ ಶಿಕ್ಷಣ ಸಂಸ್ಥೆಯಲ್ಲಿನ PG Diploma in E-Commerce and Digitization ಕೋರ್ಸ್‌ಗೆ, ಮರಿಯನ್ ಇನ್ಸ್ಟಿಟ್ಯೂಟ್ ಆಫ್ ಪ್ರೊಫೆಷನಲ್ ಸ್ಟಡೀಸ್, ಬೆಳವಾಡಿ, ಶ್ರೀರಂಗಪಟ್ಟಣ, ಮಂಡ್ಯ ಜಿಲ್ಲೆ ಸಂಸ್ಥೆಯಲ್ಲಿನ 1. BBA (Catering & Hotel Management) 2. BBA (Interior Design) 3. BBA (Costume Design and Fashion Technology) and 4. BBA (Airline and Airport Management) ಹಾಗೂ ವೋಗ್ ಇನ್ಸ್ಟಿಟ್ಯೂಟ್ ಆಫ್ ಫ್ಯಾಷನ್ ಟೆಕ್ನಾಲಜಿ, ಕೊಪ್ಪ, ಮದ್ದೂರು ತಾಲ್ಲೂಕು, ಮಂಡ್ಯ ಸಂಸ್ಥೆಯಲ್ಲಿನ M.Des. (Fashion Design Management) ಮತ್ತು M.Des. (Interior Design Management) ಹೊಸ ಕೋರ್ಸುಗಳನ್ನು Specialized Programme ಅಡಿಯಲ್ಲಿ ಪ್ರಾರಂಭಿಸಲು ಅಧಿಸೂಚನೆ ಹೊರಡಿಸಲಾಗಿದ್ದು, ಆಯಾಯ ಕೋರ್ಸುಗಳಿಗೆ ಸಂಬಂಧಿಸಿದ ಅಧ್ಯಯನ ಮಂಡಳಿಗಳು ನೀಡಿರುವ ಶಿಫಾರಸ್ಸಿನನ್ವಯ ವಾಣಿಜ್ಯ ನಿಕಾಯದ ಸಭೆಯ ಅನುಮೋದನೆಯನ್ನು ಕಾಯ್ದಿರಿಸಿ, ರೆಗ್ಯುಲೇಷನ್, ಪಠ್ಯಕ್ರಮಗಳು ಮತ್ತು Scheme of Examinationಗಳಿಗೆ ಸಭೆಯು ಅನುಮೋದಿಸಿತು. |
| III.II | Specialized ಕೋರ್ಸುಗಳ ಅಧ್ಯಯನ ಮಂಡಳಿಗಳ ಶಿಫಾರಸ್ಸು ನಿರ್ಣಯಗಳನ್ನು ವಿದ್ಯಾವಿಷಯಕ ಪರಿಷತ್ ಸಭೆಯ ಅನುಮೋದನೆಯನ್ನು ಕೋರುವ ಬಗ್ಗೆ.<br>(ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ) |
| **ತೀರ್ಮಾನ** | 2020-21ನೇ ಶೈಕ್ಷಣಿಕ ಸಾಲಿನಿಂದ ಮೈಸೂರಿನ ಮಹಾಜನ ಶಿಕ್ಷಣ ಸಂಸ್ಥೆಯಲ್ಲಿನ B.Sc (Food Processing & Quality Management), B.Sc. (Geology), B.Sc. (Forensic Science) ಕೋರ್ಸ್‌ಗಳಿಗೆ, ಮರಿಯನ್ ಇನ್ಸ್ಟಿಟ್ಯೂಟ್ ಆಫ್ ಪ್ರೊಫೆಷನಲ್ ಸ್ಟಡೀಸ್, ಬೆಳವಾಡಿ, ಶ್ರೀರಂಗಪಟ್ಟಣ, ಮಂಡ್ಯ ಜಿಲ್ಲೆ ಸಂಸ್ಥೆಯಲ್ಲಿನ B.Sc. (Animation & VFX) and Fortuna Advanced Institute of Research & Studies (FAIR) ಹಾಗೂ ನಂಜನಗೂಡು ಸಂಸ್ಥೆಯಲ್ಲಿನ B.Sc. (biomedical Science), B.Sc. (Artificial Intelligence & Data Analytics) and B.Sc. (Hons.) (Advanced Agricultue) ಹೊಸ ಕೋರ್ಸುಗಳನ್ನು Specialized Programme ಅಡಿಯಲ್ಲಿ ಪ್ರಾರಂಭಿಸಲು ಅಧಿಸೂಚನೆ ಹೊರಡಿಸಲಾಗಿದ್ದು, ಆಯಾಯ ಕೋರ್ಸುಗಳಿಗೆ ಸಂಬಂಧಿಸಿದ ಅಧ್ಯಯನ ಮಂಡಳಿಗಳು ನೀಡಿರುವ ಶಿಫಾರಸ್ಸಿನನ್ವಯ ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯದ ಸಭೆಯ ಅನುಮೋದನೆಯನ್ನು ಕಾಯ್ದಿರಿಸಿ, ರೆಗ್ಯುಲೇಷನ್, ಪಠ್ಯಕ್ರಮಗಳು ಮತ್ತು Scheme of Examinationಗಳಿಗೆ ಸಭೆಯು ಅನುಮೋದಿಸಿತು. |

**ಇತರೆ ವಿಷಯಗಳು:**

1) ಶಿಕ್ಷಣ ಮಂಡಳ ಸದಸ್ಯರಾದ ಡಾ.ಕೆ.ಟಿ. ಕೃಷ್ಣೇಗೌಡ ಇವರು ಮಾತನಾಡಿ, Forensic Science ಕೋರ್ಸಿಗೆ ಹೆಚ್ಚು ಬೇಡಿಕೆಯಿದ್ದು, ಧಾರವಾಡ ಹಾಗೂ ಬೆಂಗಳೂರು ವಿಶ್ವವಿದ್ಯಾನಿಲಯಗಳಲ್ಲಿ Forensic Science ಕೋರ್ಸು ಪ್ರಾರಂಭಿಸಲಾಗಿದೆ. ಹೆಚ್ಚಿನ ವಿದ್ಯಾರ್ಥಿಗಳು ರಸಾಯನಶಾಸ್ತ್ರ, ಪ್ರಾಣಿಶಾಸ್ತ್ರ, ಅಪರಾಧಶಾಸ್ತ್ರ ಹಾಗೂ Forensic Science ವಿಷಯಗಳಲ್ಲಿ ಆಸಕ್ತಿ ತೋರುತ್ತಿರುವುದು ಗಮನಕ್ಕೆ ಬಂದಿದೆ. ಈ ಸಂಬಂಧ ನಮ್ಮ ಕಾಲೇಜಿನಲ್ಲಿ ಕಳೆದ ಶೈಕ್ಷಣಿಕ ಸಾಲಿನಲ್ಲಿ ಗೃಹ ವಿಜ್ಞಾನ ವಿಷಯದೊಂದಿಗೆ Forensic Science ವಿಷಯವನ್ನು ಪ್ರಾರಂಭಿಸಲು ವಿಶ್ವವಿದ್ಯಾನಿಲಯಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಆದರೆ, ಸಮಿತಿಯು ಈ ಪ್ರಸ್ತಾವನೆಯನ್ನು ಅನುಮೋದಿಸಲಿಲ್ಲ. Forensic Science ವಿಷಯವನ್ನು ಪ್ರಾರಂಭಿಸಲು 4-5 ಕಾಲೇಜುಗಳು ವಿಶ್ವವಿದ್ಯಾನಿಲಯಕ್ಕೆ ಪ್ರಸ್ತಾವನೆ ಸಲ್ಲಿಸಿದರೆ, ವಿಶ್ವವಿದ್ಯಾನಿಲಯವು ಅನುಮೋದಿಸಬೇಕೆಂದು ಕೋರಿದರು.

ಪ್ರೊ.ಜಿ.ವೆಂಕಟೇಶ್‌ಕುಮಾರ್, ಡೀನರು, ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ ಇವರು ಮಾತನಾಡಿ, ಈಗಾಗಲೇ ಮೈಸೂರು ವಿಶ್ವವಿದ್ಯಾನಿಲಯದ ಘಟಕ ಕಾಲೇಜಾದ ಮಹಾರಾಜ ಕಾಲೇಜಿನಲ್ಲಿ Criminology and Forensic Science ಕೋರ್ಸು ಸುಮಾರು ವರ್ಷಗಳ ಹಿಂದೆಯೇ ಪ್ರಾರಂಭವಾಗಿರುತ್ತದೆ. ಪ್ರಸ್ತುತ Forensic Science ಕೋರ್ಸ್‌ಗೆ ಅತಿ ಬೇಡಿಕೆಯಿರುವುದರಿಂದ, ಮೈಸೂರು ವಿಶ್ವವಿದ್ಯಾನಿಲಯದಿಂದ "Forensic Science" ಕೋರ್ಸ್‌ಗೆ ಪ್ರತ್ಯೇಕ ಅಧ್ಯಯನ ವಿಭಾಗವನ್ನಾಗಿ ಪ್ರಾರಂಭಿಸುವುದು ಸೂಕ್ತ. ಹಾಗೆಯೇ, ಪ್ರಸ್ತುತ Criminology and Forensic Science ವಿಷಯವು ಕಲಾ ನಿಕಾಯದಲ್ಲಿರುವುದನ್ನು Forensic Science ವಿಷಯವೆಂದು ಪ್ರತ್ಯೇಕಗೊಳಿಸಿದ ನಂತರ, ಈ ವಿಷಯವನ್ನು ವಿಜ್ಞಾನ ಹಾಗೂ ತಂತ್ರಜ್ಞಾನ ನಿಕಾಯಕ್ಕೆ ಸೇರ್ಪಡೆಗೊಳಿಸಬೇಕೆಂದು ತಿಳಿಸಿದರು.

ಮೇಲ್ಕಂಡ ಅಂಶಗಳನ್ನು ಪರಾಮರ್ಶಿಸಿದ ಮಾನ್ಯ ಕುಲಪತಿಯವರು ಮಾತನಾಡಿ, ಇತ್ತೀಚಿನ ದಿನಗಳಲ್ಲಿ Forensic Science ಎಂಬ ವಿಷಯಕ್ಕೆ ಬೇಡಿಕೆ ಹೆಚ್ಚಾಗುತ್ತಿರುವುದು ಕಂಡು ಬಂದಿದ್ದು, ಈ ವಿಷಯವನ್ನು ಪ್ರಾರಂಭಿಸಲು ಪ್ರೊ.ಎಸ್.ಆರ್.ನಿರಂಜನ್ ಇವರನ್ನೊಳಗೊಂಡಂತೆ ಒಂದು ಸಮಿತಿಯನ್ನು ರಚಿಸಲಾಗುವುದು. ಸಮಿತಿಯು ಸಿದ್ಧಪಡಿಸುವ ರೂಪುರೇಷೆಯೊಂದಿಗೆ ಮುಂದಿನ ಶೈಕ್ಷಣಿಕ ಸಾಲಿನಿಂದ ಮೈಸೂರು ವಿಶ್ವವಿದ್ಯಾನಿಲಯದಲ್ಲಿ Forensic Science ಕೋರ್ಸು ಪ್ರಾರಂಭಿಸಲು ಕ್ರಮ ತೆಗೆದುಕೊಳ್ಳಲಾಗುವುದೆಂದು ಸಭೆಯಲ್ಲಿ ಪ್ರಸ್ತಾಪಿಸಿದರು.

2) ಶಿಕ್ಷಣ ಮಂಡಳ ಸದಸ್ಯರಾದ ಡಾ.ಜೆ.ಎನ್..ವೆಂಕಟೇಶ್ ಇವರು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯದಿಂದ ಕಾಲೇಜುಗಳಿಗೆ "ಶೈಕ್ಷಣಿಕ ವೇಳಾಪಟ್ಟಿ"ಯನ್ನು ಕಳುಹಿಸಿರುವುದಿಲ್ಲ. ಇದರಿಂದ ತರಗತಿಗಳ ಪ್ರಾರಂಭ ದಿನಾಂಕ, ಮುಕ್ತಾಯ ದಿನಾಂಕ, ಪರೀಕ್ಷೆಗಳು ಪ್ರಾರಂಭವಾಗುವ ದಿನಾಂಕಗಳು ಹಾಗೂ ಶೈಕ್ಷಣಿಕ ವೇಳಾಪಟ್ಟಿಗೆ ಸಂಬಂಧಿಸಿದ ಇತರೆ ಮಾಹಿತಿಗಳು ಅಧ್ಯಾಪಕರು ಹಾಗೂ ವಿದ್ಯಾರ್ಥಿಗಳಿಗೆ ಲಭ್ಯವಾಗದಿರುವುದರಿಂದ ಗೊಂದಲಕ್ಕೀಡಾಗಿದೆ ಎಂದು ಸಭೆಯಲ್ಲಿ ತಿಳಿಸಿದರು.

ಈ ಸಂಬಂಧ ಮಾನ್ಯ ಕುಲಪತಿಯವರು ಮಾತನಾಡಿ, ಅಂತಿಮ ವರ್ಷದ ತರಗತಿಗಳು ಪ್ರಾರಂಭವಾಗಿದ್ದರೂ ಶೇ.25ರಷ್ಟು ವಿದ್ಯಾರ್ಥಿಗಳು ಮಾತ್ರ ಹಾಜರಾಗುತ್ತಿದ್ದಾರೆ. ಇದರಿಂದ ನೇರ ತರಗತಿಯೊಂದಿಗೆ ಆನ್‌ಲೈನ್ ತರಗತಿಗಳನ್ನು ಪ್ರಾರಂಭಿಸಲಾಗಿದೆ. ಈ ಶೈಕ್ಷಣಿಕ ವೇಳಾಪಟ್ಟಿಗೆ ಸಂಬಂಧಿಸಿದಂತೆ ಒಂದು ವಾರದೊಳಗೆ ರಾಜ್ಯ ಸರ್ಕಾರದೊಂದಿಗೆ ಚರ್ಚಿಸಿ ನಿರ್ಧಾರ ಕೈಗೊಳ್ಳಲಾಗುವುದೆಂದು ತಿಳಿಸಿದರು.

3) ಶಿಕ್ಷಣ ಮಂಡಳ ಸದಸ್ಯರಾದ ಡಾ.ಕೆ.ಟಿ. ಕೃಷ್ಣೇಗೌಡ ಇವರು ಮಾತನಾಡಿ, ವಿದ್ಯಾರ್ಥಿಗಳ ಅಂಕಪಟ್ಟಿಗಳನ್ನು ನಿಗಧಿತ ಅವಧಿಯೊಳಗೆ ಕಾಲೇಜುಗಳಿಗೆ ಕಳುಹಿಸುವುದಿಲ್ಲ ಹಾಗೂ ಹೆಚ್ಚಿನ ಅಂಕಪಟ್ಟಿಗಳಲ್ಲಿ 'NCL' ಮತ್ತು 'TAL'ಎಂದು ಮುದ್ರಿತವಾಗಿರುವುದು ಕಂಡು ಬಂದಿದೆ. ಇದರಿಂದ ಅಂತಿಮ ವರ್ಷದ ವಿದ್ಯಾರ್ಥಿಗಳ ವಿದ್ಯಾಭ್ಯಾಸ ಪೂರ್ಣಗೊಂಡಿದ್ದರೂ ಅಂಕಪಟ್ಟಿವಿಲ್ಲದೆ ಮುಂದಿನ ಭವಿಷ್ಯಕ್ಕೆ ತೊಂದರೆಯಾಗುತ್ತಿದೆ. ಆದುದರಿಂದ, ವಿದ್ಯಾರ್ಥಿಗಳಿಗೆ ನಿಗಧಿತ ಅವಧಿಯೊಳಗೆ ಅಂಕಪಟ್ಟಿಗಳು ದೊರೆಯುವಂತೆ ವ್ಯವಸ್ಥೆ ಮಾಡಬೇಕೆಂದು ತಿಳಿಸಿದರು.

ವಿದ್ಯಾರ್ಥಿಗಳ ಅಂಕಪಟ್ಟಿಗಳ ಬಗ್ಗೆ ಪ್ರತಿಕ್ರಿಯಿಸಿದ ಕುಲಸಚಿವ (ಪರೀಕ್ಷಾಂಗ)ರವರು ಮಾತನಾಡಿ, ವಿಶ್ವವಿದ್ಯಾನಿಲಯವು ಪ್ರಕಟಣೆಯಲ್ಲಿ ಸೂಚಿಸಿರುವ ದಿನಾಂಕದೊಳಗೆ ಕಾಲೇಜುಗಳಿಂದ ಎಲ್ಲಾ ವಿದ್ಯಾರ್ಥಿಗಳ ಸಿ1 ಹಾಗೂ ಸಿ2 ಅಂಕಗಳು ತಲುಪಿಸಿರುವುದಿಲ್ಲ. ಇದರಿಂದ ಕಾಲೇಜುಗಳಿಗೆ ನಿಗಧಿತ ವೇಳೆಯಲ್ಲಿ ಅಂಕಪಟ್ಟಿಗಳನ್ನು ರವಾನಿಸುವುದರಲ್ಲಿ ವ್ಯತ್ಯಾಸವಾಗುತ್ತಿದೆ. ಇಂತಹ ನ್ಯೂನತೆಗಳು ಹೆಚ್ಚಿನ ಮಟ್ಟದಲ್ಲಿ ಕಾಲೇಜುಗಳ ಕಛೇರಿಗಳಿಂದಾಗುತ್ತಿರುವುದು ಕಂಡು ಬಂದಿದೆ. ಫಲಿತಾಂಶ ಪ್ರಕಟವಾಗಿ ವಿದ್ಯಾರ್ಥಿಗಳು ತಮ್ಮ ಅಂಕಪಟ್ಟಿಯಲ್ಲಿ 'NCL' ಮತ್ತು 'TAL' ಎಂದು ಮುದ್ರಿತವಾಗಿರುವ ಬಗ್ಗೆ ವಿಚಾರಿಸಿದಾಗ, ಇಂತಹ ಅಂಕಪಟ್ಟಿಗಳ ಬಗ್ಗೆ ಕೂಲಂಕಷವಾಗಿ ಪರಿಶೀಲಿಸಿದ ನಂತರ ಕಾಲೇಜುಗಳಿಂದ ಸಿ1, ಸಿ2, ಆಂತರಿಕ, ಪ್ರಾಯೋಗಿಕ ಹಾಗೂ ಪ್ರಾಜೆಕ್ಟ್ ಅಂಕಗಳಲ್ಲಿ ಯಾವುದಾದರೂ ಒಂದನ್ನು ವಿಶ್ವವಿದ್ಯಾನಿಲಯಕ್ಕೆ ಕಳುಹಿಸಿರುವುದಿಲ್ಲ. ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಸಂಬಂಧಿಸಿದ ಕಾಲೇಜನ್ನು ಸ್ವಯಂ ಆಸಕ್ತಿಯಿಂದ ದೂರವಾಣಿ/ಮೊಬೈಲ್ ಮುಖಾಂತರ ಸಂಪರ್ಕಿಸಿ ಸಂಬಂಧಿಸಿದ ಅಂಕಗಳನ್ನು ಪಡೆದು ಅಂಕಪಟ್ಟಿಯಲ್ಲಿ ಸೇರ್ಪಡೆಗೊಳಿಸಿ ಮರು ಮುದ್ರಿಸಿ ವಿದ್ಯಾರ್ಥಿಗಳಿಗೆ ಪರಿಷ್ಕೃತ ಅಂಕಪಟ್ಟಿಯನ್ನು ನೀಡಲಾಗುತ್ತಿದೆ. ಇದರಿಂದ ವಿದ್ಯಾರ್ಥಿಗಳ ಅಂಕಪಟ್ಟಿಗಳ ಸಮಸ್ಯೆಗಳನ್ನು ಈಗಾಗಲೇ case by case ಬಗೆಹರಿಸಲಾಗಿದೆ ಎಂದು ತಿಳಿಸಿದರು.

4) ಪ್ರೊ. ಮುಜಾಫರ್ ಅಸ್ಸಾದಿ ಅವರು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸಾಕಷ್ಟು ಪ್ರಾಧ್ಯಾಪಕರು 10-15 ವರ್ಷಗಳ ಸುದೀರ್ಘ ಸೇವೆಯನ್ನು ಸಲ್ಲಿಸಿರುತ್ತಾರೆ. ಯುಜಿಸಿ ನಿಯಮಾವಳಿಯಲ್ಲಿ "ಹಿರಿಯ ಪ್ರಾಧ್ಯಾಪಕ" ಎಂಬ ಹುದ್ದೆಯನ್ನು ವಿಶ್ವವಿದ್ಯಾನಿಲಯಗಳಲ್ಲಿ ಸೃಜಿಸಬಹುದೆಂದು ತಿಳಿಸಿರುವ ಹಿನ್ನೆಲೆಯಲ್ಲಿ, ಪ್ರಾಧ್ಯಾಪಕರುಗಳು 10 ವರ್ಷಗಳ ಸುದೀರ್ಘ ಸೇವೆಯೊಂದಿಗೆ ಸಂಬಂಧಪಟ್ಟ ವಿಷಯದಲ್ಲಿ 10 ಲೇಖನ/ಪತ್ರಿಕೆಗಳನ್ನು ಪ್ರಕಟಿಸಿರುವವರನ್ನು ಗುರುತಿಸಿ ಸಿಎಎಸ್ ಮೂಲಕ "ಹಿರಿಯ ಪ್ರಾಧ್ಯಾಪಕ" ಹುದ್ದೆಯನ್ನು ಪದೋನ್ನತಿ ನೀಡಬಹುದೆಂದು ಸಭೆಯಲ್ಲಿ ಪ್ರಸ್ತಾಪಿಸಿದರು.

ಈ ಪ್ರಸ್ತಾವನೆ ಸಂಬಂಧ ಮಾತನಾಡಿದ ಮಾನ್ಯ ಕುಲಪತಿಗಳು, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪ್ರಾಧ್ಯಾಪಕ ಹುದ್ದೆಯಲ್ಲಿ 10 ವರ್ಷಗಳ ಸೇವೆ ಹಾಗೂ 10 ಲೇಖನ/ಪತ್ರಿಕೆಗಳನ್ನು ಪ್ರಕಟಿಸಿರುವವರು ಸಾಕಷ್ಟು ಪ್ರಾಧ್ಯಾಪಕರುಗಳಿದ್ದಾರೆ. ಇವರುಗಳ ಸೇವೆ ಹಾಗೂ ಹಿರಿತನವನ್ನು ಗುರುತಿಸಿ "ಹಿರಿಯ ಪ್ರಾಧ್ಯಾಪಕ" ಹುದ್ದೆಯನ್ನು ಸೃಜಿಸುವ ಬಗ್ಗೆ ಸಮಿತಿಯನ್ನು ರಚಿಸಿ, ಅಧಿನಿಯಮವನ್ನು ಪರಿಷ್ಕರಿಸಿ ಅನುಷ್ಠಾನಗೊಳಿಸುವ ಸಂಬಂಧ ಮುಂಬರುವ ಶಿಕ್ಷಣ ಮಂಡಳ ಸಭೆಯಲ್ಲಿ ಕೂಲಂಕಷವಾಗಿ ಚರ್ಚಿಸೋಣವೆಂದು ತಿಳಿಸಿದರು.

5) ಪ್ರೊ. ಎನ್.ಎಂ. ತಳವಾರ್, ಡೀನರು, ಕಲಾ ನಿಕಾಯ ಇವರು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಹಿಂದೆ ವಿದ್ಯಾರ್ಥಿಗಳ ಉತ್ತರ ಪತ್ರಿಕೆಗಳನ್ನು Double Valuation ಮಾಡಲಾಗುತ್ತಿತ್ತು. ಪ್ರಸ್ತುತ Single Valuation ನಡೆಯುತ್ತಿರುವುದರಿಂದ ಮೌಲ್ಯಮಾಪನದ ಗುಣಮಟ್ಟ ಕುಸಿಯುತ್ತಿದೆ ಎಂದು ನನ್ನ ಭಾವನೆ. Single Valuation ಯಿಂದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಅನ್ಯಾಯವಾಗುತ್ತಿದೆಂದು ಕೆಲವು ವಿದ್ಯಾರ್ಥಿಗಳು ಹಲವಾರು ಬಾರಿ ಮೌಖಿಕವಾಗಿ ತಿಳಿಸಿರುವ ಹಿನ್ನೆಲೆಯಲ್ಲಿ, ವಿದ್ಯಾರ್ಥಿಗಳ ಹಿತದೃಷ್ಟಿಯಿಂದ Double Valuation ಅನ್ನು ಪುನರ್

ಅನುಷ್ಠಾನಗೊಳಸಬೇಕೆಂದು ತಿಳಿಸಿದರು. ಈ ಪ್ರಸ್ತಾವನೆಗೆ ವಿಶ್ವವಿದ್ಯಾನಿಲಯದ ಎಲ್ಲಾ ಡೀನರುಗಳು ದನಿಗೂಡಿಸಿದರು.

ಈ ಸಂಬಂಧ ಮಾತನಾಡಿದ ಮಾನ್ಯ ಕುಲಪತಿಗಳು, ವಿಶ್ವವಿದ್ಯಾನಿಲಯದ ಕೆಲವು ವಿಭಾಗಗಳು FCBCS ಪಠ್ಯಕ್ರಮವನ್ನು ಅಳವಡಿಸಿಕೊಂಡಿರುತ್ತಾರೆ. CBCS ನಲ್ಲಿ ಸಿ1, ಸಿ2 ಮತ್ತು ಸಿ3 ಪತ್ರಿಕೆಗಳನ್ನು ಅಂತರಿಕ ಅಧ್ಯಾಪಕರುಗಳೇ ಮೌಲ್ಯಮಾಪನ ಮಾಡುತ್ತಿದ್ದಾರೆ. ಪ್ರಸ್ತುತ ಸಿ3 ಪತ್ರಿಕೆಯನ್ನು Double Valuation ಮಾಡಿಸುವ ಸಂಬಂಧ ಎಲ್ಲಾ ವಿಭಾಗ/ಕೇಂದ್ರ/ಕಾಲೇಜುಗಳ ಅಧ್ಯಾಪಕರುಗಳೊಂದಿಗೆ ಚರ್ಚಿಸಿ ಯುಜಿಸಿ ನಿಯಮದಲ್ಲಿ ಮಾರ್ಪಾಡು ಮಾಡಲು ಅವಕಾಶವಿದ್ದರೆ ಜಾರಿಗೊಳಸಲು ಕ್ರಮ ತೆಗೆದುಕೊಳ್ಳಲಾಗುವುದೆಂದು ತಿಳಿಸಿದರು.

ಸಹಿ/-
**ಕುಲಸಚಿವ ಮತ್ತು ಸದಸ್ಯ ಕಾರ್ಯದರ್ಶಿ**

ಸಹಿ/-
**ಕುಲಪತಿ ಮತ್ತು ಅಧ್ಯಕ್ಷರು**